

ಕನ್ನಡ ಸಾಹಿತ್ಯದಲ್ಲಿ ಹಾಸ್ಯ

ಎಸ್. ವಿ. ರಂಗಣ್ಣ

ಕನ್ನಡ ಸಾಹಿತ್ಯದಲ್ಲಿ ಹಾಸ್ಯ

ಎಸ್. ವಿ. ರಂಗಣ್ಣ

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ನೃಪತುಂಗ ರಸ್ತೆ
ಬೆಂಗಳೂರು-೫೬೦ ೦೦೨

ಶ್ರೀ ಎಸ್.ವಿ.ರಂಗಣ್ಣ ಅವರಿಂದ ರಚಿಸಲ್ಪಟ್ಟ 'ಕನ್ನಡ ಸಾಹಿತ್ಯದಲ್ಲಿ ಹಾಸ್ಯ' ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದವರಿಂದ ಪ್ರಥಮ ವಿಶ್ವ ಕನ್ನಡ ಸಮ್ಮೇಳನದ ಸಂದರ್ಭದಲ್ಲಿ (ಜನವರಿ ೧೯೮೩) ಐಬಿಎಚ್ ಪ್ರಕಾಶನದವರ ಕೃಪೆಯಿಂದ ಪ್ರಕಟಿಸಲ್ಪಟ್ಟಿದ್ದು.

KANNADA SAHITYADALLI HASYA— a monograph on Humour in Kannada Literature written by Sri S. V. Ranganna. Published by The Directorate of Kannada and Culture, Government of Karnataka, 14/3A Nrupathunga Road, Bangalore-560 002, on the occasion of the *FIRST WORLD KANNADA CONFERENCE (January 1983)* by the Courtesy of IBH Prakashana, Gandhinagar, Bangalore-560 009.

ಬೆಲೆ ರೂ. ೨-೦೦

ಮುಖಪುಟ : ಪ. ಸ. ಕುಮಾರ್
ಒಳಚಿತ್ರಗಳು : ಮನೋಹರ್

ಮುದ್ರಕರು : ಎಚ್. ಎಸ್. ಎನ್. ರಾವ್, ಐಬಿಎಚ್ ಪ್ರಕಾಶನ ಪ್ರಿಂಟರಿ,
ಬೆಂಗಳೂರು-೫೬೦೦೦೯

೧

"ಹಾಸ್ಯ ಎಂದರೇನು ?" ಎಂಬ ಪ್ರಶ್ನೆಗೆ ಒಂದೇ ವಾಕ್ಯದಲ್ಲಿ ಉತ್ತರ ಹೇಳುವುದು ಕಷ್ಟ. ಅಂಥ ನಿರ್ದೇಶನ ವಚನ ತಾನೇ ಹಾಸ್ಯಾಸ್ಪದವಾಗಬಹುದು. ಹಲವು ವಾಕ್ಯಗಳನ್ನು ಬಳಸಿಕೊಂಡು ಮುಖ್ಯ ಲಕ್ಷಣಗಳನ್ನು ವಿವರಿಸಿದರೆ ಹಾಸ್ಯದ ವಿಚಾರವಾಗಿ ಸಾಕಷ್ಟು ಪರಿಚಯು ನಮಗೆ ಲಭ್ಯವಾದೀತು. ಸಮಸ್ತ ಪ್ರಾಣಿಸಂದೋಹದಲ್ಲಿ ಮನುಷ್ಯನೊಬ್ಬನೇ ನಗಬಲ್ಲ ಪ್ರಾಣಿ, ಎಂದು ಹೇಳಿದ್ದಾರೆ. ಆ ಅಭಿಪ್ರಾಯ ಸಂಪೂರ್ಣ ಸತ್ಯವಲ್ಲದಿದ್ದರೂ ಅದು ಬಹಳ ಮಟ್ಟಿಗೆ ನಿಜ. ನಗುವಿಗೆ ಕಾರಣವಾದ ಮತ್ತು ನಗುವಿನ ರೂಪದಲ್ಲಿ ಪ್ರಕಾಶಗೊಳ್ಳುವ ಮನೋಭಾವವೇ ಹಾಸ್ಯ. ಹಾಸ್ಯ ಇತರ ಬಗೆಯಲ್ಲೂ ಪ್ರಕಟವಾಗುವುದು ಸಾಧ್ಯ ; ಆದರೆ ಬಹುತೇಕ ಅದು ನಗುವಿನ ಮೂಲಕವೇ ಪ್ರತ್ಯಕ್ಷವಾಗುತ್ತದೆ. ಹಸಿವು ನೀರಡಿಕೆ ಮಾತಾಡುವುದು ಇತ್ಯಾದಿ ಪ್ರವೃತ್ತಿಗಳು ಮನುಷ್ಯನಿಗೆ ಹೇಗೆ ಸಹಜವೊ ಹಾಗೆ ಹಾಸ್ಯವೂ ಸಹಜ. ಹಸಿವಾದಾಗ ಅವನಿಗೆ ಆಹಾರ ಬೇಕು, ದಾಹವಾದಾಗ ಪಾನೀಯ ಬೇಕು, ಬೇಸರ ಕಳೆದುಕೊಳ್ಳಲು ಗೆಳೆಯರೊಂದಿಗೊ ಬಂಧುಗಳೊಂದಿಗೊ ಅವನು ಮಾತುಕತೆ ನಡೆಸಬೇಕು. ನಗು ಏತಕ್ಕಾಗಿ ಯಾವಾಗ ಎಷ್ಟು ಬೇಕಾಗುತ್ತದೆ ಎಂದು ಕೇಳಿದರೆ ಖಚಿತವಾದ ಒಂದೇ ಜವಾಬು ಎಲ್ಲರಿಂದಲೂ ಬರುವುದಿಲ್ಲ. ಒಬ್ಬ ವ್ಯಕ್ತಿ ಇತರರಿಗಿಂತ ತಾನು ಶ್ರೇಷ್ಠನೆಂದು ಸಾರುವುದಕ್ಕೋಸ್ಕರ ನಗುತ್ತಾನೆ ; ಆಶಾವಾದವೂ ಗೆಲುವು ಭಾವನೆಯೂ ಒಬ್ಬನಲ್ಲಿ ತುಂಬಿಕೊಂಡಾಗ ಅವನಿಂದ ನಗು ಹೊರಬರುತ್ತದೆ ; ಏನೊ ಸಂಕಷ್ಟ ಒಬ್ಬನನ್ನು ಮುತ್ತಿಕೊಂಡಾಗ ಆತ ಗೋಳಿಡುವುದರ ಬದಲು ಯತ್ನವಿಲ್ಲದೆ ನಗುತ್ತಾನೆ ; ಯಾವುದೊ ಅಸ್ಪಷ್ಟ ಹೊರೆ ಎದೆಯನ್ನು ಅವುಕುತ್ತಿರುವಾಗ ಅದನ್ನು ಇಳಿಸಿ ಸಮಾಧಾನಚಿತ್ತ



ನಾಗುವುದಕ್ಕೆ ಆ ಪುರುಷನಿಗೆ ನಗುವೇ ಏಕೈಕ ಸಾಧನ ; ಯಾವೊಂದು ಪ್ರಚೋದನೆಯೂ ಇಲ್ಲದೆ ಸುಮ್ಮನೆ ಕ್ರೀಡಾಪೇಕ್ಷೆ ಒಬ್ಬನಲ್ಲಿ ಉಲ್ಬಣ ವಾದಾಗ ಅವನು ಎಸಗುವ ಕ್ರಿಯೆಯೇ ನಗು : ಹೀಗೆಲ್ಲ ವಿದ್ವಾಂಸರು ವಾದ ಮಾಡಿದ್ದಾರೆ ಒಟ್ಟಿನಲ್ಲಿ ಆದಿಯಿಂದ ಇಂದಿನವರೆಗೂ ಬಹುಶಃ ಮುಂದೆಯೂ ಕೂಡ ಮಾನವ ವಿನೋದಪ್ರಿಯ, ಹಾಸ್ಯವನ್ನುಳಿದು ಅವನು ಇರಲಾರ, ದಿವಸ ನೂಕಲಾರ.

೨

ಗಾಂಭೀರ್ಯಕ್ಕೆ ಸರಿಸುಮಾರಾಗಿ ಒಂದೇ ಮುಖಭಾವ, ಹಾಸ್ಯಕ್ಕಾದರೊ ಹಲವು ಬಗೆ. ಏತಕ್ಕೆಂದರೆ ಯಾವ ದಿಕ್ಕಿನವರಾಗಲಿ ಯಾವ ದೇಶದವರಾಗಲಿ ಎಲ್ಲರೂ ಅಳುವುದು ಹೆಚ್ಚು ಕಡಮೆ ಏಕರೀತಿಯಲ್ಲಿ ; ಅವರು ನಗುವು ದಾದರೊ ಅನೇಕ ರೀತಿಯಲ್ಲಿ. ಸ್ಕಾಟ್ಲೆಂಡಿನ ಜನರು ಮಿತವ್ಯಯಿಗಳು ; ಬಿಡಿ ಕಾಸನ್ನೂ ವ್ಯರ್ಥಮಾಡದ ಅವರ ನಡೆವಳಿಕೆ ಉದಾರಿಗಳಾದ ಐರ್ಲೆಂಡಿನವ ರಿಗೆ ವಿನೋದಕರ ; ಭಾವಾವೇಶದ ಫ್ರೆಂಚರನ್ನು ಕಂಡು ಅತಿಮೌನದ ಇಂಗ್ಲಿಷ ರಿಗೆ ಅಪಹಾಸ್ಯ ; ಉತ್ಪ್ರೇಕ್ಷೆಯ ಮತ್ತು ಬಡಾಯಿಯ ಅಮೇರಿಕರನ್ನು ಕುರಿತು ಮಿತಭಾಷಿಗಳೂ ವಿನಯಶಾಲಿಗಳೂ ಆದ ಜನಾಂಗಗಳಿಗೆ ಪರಿಹಾಸ. ಹಿಂದೆ ಬಿಳಿ ಚರ್ಮದ ಮಂದಿಯನ್ನು ನೋಡಿದ ಆಫ್ರಿಕದವರಿಗೆ "ಇವರೇನು ಮೈಯಿಗೆ ಸುಣ್ಣ ಹಚ್ಚಿಕೊಂಡಿದ್ದಾರೆಯೊ ?" ಎಂದು ಗಹಗಹಿಕೆ. ಸ್ವಭಾವ ವ್ಯತ್ಯಾಸವೂ ಆಚಾರವ್ಯತ್ಯಾಸವೂ ಲೋಕವನ್ನು ತುಂಬಿಕೊಂಡಿರುವವರೆಗೂ ಪರಸ್ಪರ ವಿಡಂಬನೆ ಅನಿವಾರ್ಯ. ವೇಷ-ಭೂಷಣಗಳಲ್ಲಿ "ಫ್ಯಾಶನ್" ಎಂಬುದರ ಹಾವಳಿ ತಾನೇ ತಾನು : ಕೆಲವರಿಗೆ ಚೆಲುವಾದ ಅಲಂಕಾರವೆಂದು ತೋರಿಬರುವ ಫ್ಯಾಶನ್ ಇತರ ಕೆಲವರಿಗೆ ಕೇವಲ ಲಂಬಾಣಿ ವೈಖರಿಯಂತೆ ಕಾಣಿಸಬಹುದು ; ಶಿಷ್ಟಸಂಪ್ರದಾಯದವರ ಮೂರುನಾಮ ವಿಭೂತಿಪಟ್ಟೆ ಗಳು ಎಷ್ಟು ವಿಕಾರವಾಗಿ ಅತಿನವ್ಯರಿಗೆ ಭಾಸವಾಗುತ್ತವೆಯೋ ಅಷ್ಟೇ

ವಿಕಾರವಾಗಿ ಇವರ ಹಿಪ್ಪೀಸೋಗು ಅವರಿಗೆ ಭಾಸವಾಗುತ್ತದೆ. ಯಾವುದು ನಗೆಪಾಟಲು, ಯಾವುದು ನಗೆಪಾಟಲಲ್ಲ ? ನಾಗರಿಕತೆಯೂ ಸುಸಂಸ್ಕೃತಿಯೂ ಬೆಳೆಯುತ್ತ ಹೋದಂತೆ ಅನ್ಯೋನ್ಯ ಸೌಹಾರ್ದ ವೃದ್ಧಿಯಾಗುತ್ತದೆ, ಅನ್ಯೋನ್ಯ ಅವಹೇಳನ ಕಡಮೆಯಾಗುತ್ತದೆ ; ಹಾಗು ಹಾಸ್ಯ ಒಡ್ಡೊಡ್ಡುತನ ವನ್ನು ನೀಗಿಕೊಂಡು ಹೆಚ್ಚು ಹೆಚ್ಚಾಗಿ ನಯವಾಗುತ್ತದೆ, ನಾಜೂಕಾಗುತ್ತದೆ.

೩

ನಗುವಿನ ಪ್ರಮಾಣವನ್ನು ಭಾವಿಸಿಕೊಂಡು ನಮ್ಮ ಪಂಡಿತರು ಸ್ಮಿತ ಹಸಿತ ವಿಹಸಿತ ಉಪಹಸಿತ ಅಪಹಸಿತ ಅತಹಸಿತ ಎಂಬ ಆರು ವರ್ಗಗಳನ್ನು ವಿಂಗಡಿಸಿದ್ದಾರೆ. ಸ್ಮಿತದಲ್ಲಿ ಕಣ್ಣುಗಳು ಮಾತ್ರ ಕೊಂಚ ಅರಳಿರುತ್ತವೆ ; ನಗು ಇದೆಯೊ ಇಲ್ಲವೊ ಎಂಬಷ್ಟು ಸೂಕ್ಷ್ಮ. ಹಸಿತದಲ್ಲಿ ಅರಳಿದ ಕಣ್ಣಿನ ಜೊತೆಗೆ ಹಲ್ಲು ಸ್ವಲ್ಪ ಕಾಣಿಸುತ್ತ ತುಟಿಗಳ ಮೇಲೆ ನಗುಭಾವ ಮಿಂಚುತ್ತದೆ. ಇವೆರಡೂ ಉತ್ತಮ ಹಾಸ್ಯವಂತೆ. ಮಧುರವಾದ ಧ್ವನಿಯೂ ಕೂಡಿಬಂದರೆ ವಿಹಸಿತವಾಗುತ್ತದೆ. ತಲೆಯೂ ಅಷ್ಟಿಷ್ಟು ಅತ್ತಿತ್ತ ಚಲಿಸುತ್ತಿದ್ದರೆ ಅದು ಉಪಹಸಿತ. ಇವೆರಡೂ ಮಧ್ಯಮ ಹಾಸ್ಯವಂತೆ. ಕಣ್ಣಿನಲ್ಲಿ ನೀರು ತುಂಬಿ ಕೊಂಡರೆ ಅದು ಅಪಹಸಿತ. ಪಕ್ಕಗಳನ್ನು ತಿವಿದುಕೊಂಡು ನೆಲದ ಮೇಲೆ ಬಿದ್ದು ಒದ್ದಾಡುತ್ತ ಹಾಗುಟ್ಟುವುದೇ ಅತಿಹಸಿತ. ಇವೆರಡೂ ಅಧಮ ಹಾಸ್ಯ ವಂತೆ. ಇಂಥ ವರ್ಗೀಕರಣ ಆಧುನಿಕರಿಗೆ ಶಾಸ್ತ್ರೀಯವಾಗಿ ತೋರುವುದಿಲ್ಲ : ಏತಕ್ಕೆಂದರೆ ಇದೆಲ್ಲ ಸುಮ್ಮನೆ ಗುರುತುಚೀಟಿ ಅಂಟಿಸುವ ಹವ್ಯಾಸ. ಗುರುತು ಚೀಟಿಗಳು ಬೇರೆ, ವಾಸ್ತವಿಕ ನಿಜಾಂಶಗಳು ಬೇರೆ. ಹಾಸ್ಯ ಹೆಚ್ಚಾಗಿ ಆಂತರಿಕ ವಿದ್ಯಮಾನಗಳಿಗೆ ಸಂಬಂಧಿಸಿದ್ದು ; ನಗು ಹೆಚ್ಚಾಗಿ ಬಾಹ್ಯ ವ್ಯಾಪಾರಗಳಿಗೆ ಸಂಬಂಧಿಸಿದ್ದು. ಆದರೆ ಎರಡೂ ನಿಜವಾಗಿ ಹಲವು ಘಟಕಾಂಶಗಳ ಸಮ್ಮಿಶ್ರ ಹೊಂದಾಣಿಕೆ. ಹಾಸ್ಯವನ್ನು ಗುಂಪು ಗುಂಪಾಗಿ ಬೇರ್ಪಡಿಸಲೇ ಬೇಕಾದರೆ ನಯಹಾಸ್ಯ, ಒರಟುಹಾಸ್ಯ, ಕಟುಹಾಸ್ಯ, ಬಿರುಸುಹಾಸ್ಯ, ನಿಂದಾಹಾಸ್ಯ,

ಖಂಡನಹಾಸ್ಯ ಮುಂತಾಗಿ ನಮನಮಗೆ ಸೂಕ್ತವೆನ್ನಿಸುವ ಕ್ರಮದಲ್ಲಿ ನಿರ್ಧರಿಸಬಹುದು. ಉತ್ತಮ ಮಧ್ಯಮ ಕನಿಷ್ಠ ಅಥವಾ ಅಧಮ ಎಂಬ ಶಬ್ದಗಳು ಸಾಪೇಕ್ಷ ಅಂಕಿತಗಳು ; ಒಂದು ಸಮಯ ಸಂದರ್ಭದಲ್ಲಿ ಲಲಿತಹಾಸ್ಯ ಇಷ್ಟವಾಗುತ್ತದೆ ; ಇನ್ನೊಂದರಲ್ಲಿ ಬಿರುಸುಹಾಸ್ಯವೇ ರುಚಿಯೆನ್ನಿಸುತ್ತದೆ, ಈಗ ಗ್ರಾಂಥಿಕಹಾಸ್ಯ ಹಿತವಾದರೆ ಇನ್ನೊಮ್ಮೆ ಅಂಕೆಯಿಲ್ಲದ ಲೇವಡಿಯೇ ತಲೆದೂಗಿಸಬಹುದು. ನರಚಾಪಲ್ಯದ ನೂರೆಂಟು ಭಂಗಿಗಳನ್ನು ಪಟ್ಟಿಮಾಡಿ ಮುಗಿಸಲಾದೀತೆ ? ಅವರವರಿಗೆ ತಕ್ಕ ಹಾಸ್ಯ ಅವರವರಿಗೆ ಸಮೃದ್ಧವಾಗಿ ದೊರಕಲಿ ; ಎಲ್ಲರ ಜೀವನವೂ ನಗುಮುಖದ ಗೆಲವಿನಿಂದ ಉಲ್ಲಾಸಗೊಳ್ಳುತ್ತಿರಲಿ !

೪

"ಅಳುವ ಗಂಡಸನ್ನೂ ನಗುವ ಹೆಂಗಸನ್ನೂ ನೆಚ್ಚಬಾರದು" ಎಂಬ ಗಾದೆಯೊಂದಿದೆ. "ಎಂದೂ ನಗದಿರುವ ಪುರುಷ ಕಪಟ ವಂಚನೆ ದ್ರೋಹ ಮುಂತಾದುವಕ್ಕೆ ಮಾತ್ರ ಯೋಗ್ಯ" ಎಂದು ಮಹಾಕವಿಯೊಬ್ಬ ಘೋಷಿಸಿದ್ದಾನೆ. ಇಂಥ ಹೇಳಿಕೆಗಳು ಅಸಂಖ್ಯಾತ. ಅವುಗಳಿಂದ ಸತ್ಯಾಂಶವನ್ನು ಗ್ರಹಿಸಿದರೆ ನಮಗೆ ಎರಡು ನೀತಿಗಳು ಮಂದಟ್ಟಾಗುತ್ತವೆ : ಅತಿ ಯಾರಿಗಾಗಲೀ ಕೆಟ್ಟದ್ದು; ಹಾಸ್ಯ ಸರ್ವರಿಗೂ ಬೇಕು, ಒಳ್ಳೆಯದು. ನಮ್ಮೀ ವಿಚಿತ್ರ ಭೂಮಿಯ ಮೇಲೆ ಬದುಕನ್ನು ಸಮರ್ಪಕವಾಗಿ ಸಾಗಿಸುವುದು ಕಷ್ಟಸಾಧ್ಯವಾದ ಕೆಲಸವಾದರೂ ಅಸಾಧ್ಯವಲ್ಲ. ಶ್ರದ್ಧೆ ಸಹಿಷ್ಣುತೆ ಧೈರ್ಯ ಅತ್ಯಗತ್ಯ. ಮೇಲಾಗಿ ಹಾಸ್ಯಪ್ರವೃತ್ತಿ ನಮ್ಮಲ್ಲಿ ಬೇರೂರಿರಬೇಕು : ಅದು ಅವಶ್ಯಕ ಸಂದರ್ಭಗಳಲ್ಲಿ ತಕ್ಷಣ ಮೂಡಿಬರಬೇಕು ; ಎಷ್ಟು ಬೇಕೊ ಅಷ್ಟೇ ಚಟುವಟಿಕೆ ಮೆರೆದು ಕೂಡಲೆ ಮರೆಯಾಗಬೇಕು. ಎಂದರೆ ಯುಕ್ತಾಯುಕ್ತ ವಿವೇಚನೆಗೆ ನಾವು ಪ್ರಧಾನ ಗಮನವನ್ನು ಕೊಡತಕ್ಕದ್ದು. ನಿಜವಾದ ಹಾಸ್ಯವೇ ಯುಕ್ತಾಯುಕ್ತ ವಿವೇಚನೆ ಎಂದು ತೀರ್ಮಾನಿಸಿದ್ದಾರೆ ಪ್ರಜ್ಞಾ

ವಂತರು. ಅದು ಮನನ ಮಾಡತಕ್ಕ ಸೂಕ್ತಿ. ಅಂತೂ ಹಾಸ್ಯದಿಂದ ನಮ್ಮ ಜೀವನಕ್ಕೆ ಆಗುವ ಪ್ರಯೋಜನ ಅಷ್ಟಿಷ್ಟಲ್ಲ.

೩

ನಮ್ಮ ನಮ್ಮ ಅನುಭವಗಳನ್ನು ವಿಶ್ಲೇಷಿಸಿ ಸಾರಸತ್ವವನ್ನು ಅರಿಯುತ್ತ ಬಂದಂತೆ ಹಾಸ್ಯದ ವಿಷಯವಾಗಿ ಹಲವು ಸಂಗತಿಗಳು ಹೊಸಹೊಸದಾಗಿ ಗೋಚರಿಸಿ ನಮ್ಮನ್ನು ಚಕಿತರನ್ನಾಗಿಸುತ್ತವೆ. ಆದರೆ ನಮ್ಮ ಅನುಭವ ಸೀಮಿತವಾದದ್ದು, ಸಂಕುಚಿತ, ಚಿಕ್ಕದು. ನಮ್ಮ ಒಡನಾಡಿಗಳ ಅನುಭವವೂ ಅಷ್ಟೆ. ವಿಭಾವನಾಶಕ್ತಿಯಲ್ಲೂ ಬುದ್ಧಿಬಲದಲ್ಲೂ ರಾಗರಸದಲ್ಲೂ ನಮಗಿಂತ ಮೇಲ್ಗೈಯವರಾದ ಉದ್ದಾಮ ಸಾಹಿತಿಗಳು ನಮಗೆ ದತ್ತಿಯಾಗಿ ಕೊಟ್ಟಿರುವ ಪುಸ್ತಕಭಂಡಾರದಲ್ಲಿ ಅಪೂರ್ವವೂ ವಿಧವಿಧವೂ ಅಪಾರವೂ ಆದ ಅನುಭವ ನಮಗಾಗಿ ಕಾದು ಕುಳಿತಿದೆ. ಇದನ್ನು ಪರಿಗ್ರಹಿಸಿ ಉಪಯೋಗಿಸಿಕೊಂಡಲ್ಲಿ ನಮ್ಮ ಬಾಳು ಸುಪುಷ್ಟವಾಗುತ್ತದೆ. ಕೊರೆರಹಿತವಾಗುತ್ತದೆ, ಮಂಗಳಕರವಾಗುತ್ತದೆ. ಭರತಖಂಡದ ಸಾಹಿತ್ಯದಲ್ಲಿ ಹಾಸ್ಯಕ್ಕೆ ಸ್ಥಾನವಿದೆ, ನಿಶ್ಚಯ; ಆದರೆ ಅದು ಕೇವಲ ಗೌಣ ಸ್ಥಾನ. ಶೃಂಗಾರ ವೀರ ಕರುಣಗಳ ಮಧ್ಯೆ ಅದು ಆಗಾಗ ಕ್ಷಣಿಕವಾಗಿ ಮಿನುಗುತ್ತದೆ. "ಧಿಕ್ ಪ್ರಹಸನಂ" ಎಂಬ ನುಡಿಯನ್ನು ಆಡಿದವರಿಗೂ ಅನುಷ್ಠಾನಕ್ಕೆ ತಂದವರಿಗೂ ಹಾಸ್ಯ ಹೇಗೆ ಸವಿಯಾದೀತು ? ಉತ್ಕೃಷ್ಟ ಹಾಸ್ಯಭಾಗಗಳನ್ನು ರಚಿಸಿದ ಕವಿವರ್ಯರಿಗೂ ಅದನ್ನು ಕುರಿತು ಸರಿಯಾದ ಗೌರವವಿತ್ತು ಎನ್ನಲಾಗದು. ಪಾಶ್ಚಾತ್ಯ ಪ್ರಪಂಚದಲ್ಲಿ ಹಾಸ್ಯಕ್ಕೆ ದಕ್ಕಿರುವ ಮರ್ಯಾದೆ ಶ್ಲಾಘನೀಯವಾಗಿದೆ. ಪುರಾತನ ಗ್ರೀಕ್ ಸಾಹಿತ್ಯ ಪಾಶ್ಚಾತ್ಯ ದೇಶಗಳ ಸಕಲ ಸಾಹಿತ್ಯಗಳಿಗೂ ತಾಯಿಬೇರು. ಕ್ರಿ. ಪೂ. ೫ನೆಯ ಶತಮಾನದಲ್ಲಿ ನಾಟಕ ಹುಟ್ಟಿಬಂತು ಒಂದಲ್ಲ ಎರಡು ಆಕೃತಿಯಲ್ಲಿ : ಗಂಭೀರ ನಾಟಕ (Tragedy) ಮತ್ತು ವಿನೋದ ನಾಟಕ (Comedy). ರಾಷ್ಟ್ರಗೌರವವೂ ಜನಮೆಚ್ಚಿಕೆಯೂ ಎರಡಕ್ಕೂ ಸಮಾನವಾಗಿ ದಕ್ಕಿತು. ಈಸ್ಕಿಲಸ್ಸನಿಗೆ ಗಂಭೀರ ನಾಟಕದ ಅತ್ಯುಚ್ಚ ಪೀಠ

ಸಿಕ್ಕಿದಂತೆ ಅರಿಸ್ಟೊಫೇನೀಸನಿಗೆ ವಿನೋದ ನಾಟಕದ ಅತ್ಯುಚ್ಚ ಪೀಠ ಸಿಕ್ಕಿತು. ಯಾವುದೋ ನೆರಪ್ರಾಂತದ ನಿರಂಕುಶ ಸಾರ್ವಭೌಮ ಅಥೆನ್ಸಿನಲ್ಲಿ ಏನೇನು ಆಗುತ್ತಿದೆ ತಿಳಿಸು ಎಂದು ದಾರ್ಶನಿಕ ಪ್ಲೇಟೋವನ್ನು ಬೇಡಿದಾಗ ಆತ ಯಾವ ಪತ್ರವನ್ನೂ ಬರೆಯದೆ ಅರಿಸ್ಟೊಫೇನೀಸನ ಕಾಮೆಡಿಗಳ ಪ್ರತಿಯನ್ನು ರವಾನಿಸಿದನಂತೆ ! ಅಷ್ಟೆ ಅಲ್ಲ. ಪಾನದೇವತೆಯ ದೊಡ್ಡ ಹಬ್ಬದ ಅಂಗವಾಗಿ ಗಂಭೀರ ನಾಟಕ ಸ್ಪರ್ಧೆಯಲ್ಲಿ ಭಾಗವಹಿಸುತ್ತಿದ್ದ ಕವಿವರ್ಯರು ತಮ್ಮ ಮೂರು ಗಂಭೀರನಾಟಕ ಸರಣಿ (Trilogy) ಯ ಜೊತೆಗೆ ನಾಲ್ಕನೆಯದಾಗಿ ಒಂದು 'ವಿಡಂಬನ ನಾಟಕ' (Satyr Play) ವನ್ನೂ ರಚಿಸಿ ಪ್ರದರ್ಶಿಸುವುದು ಕಡ್ಡಾಯವಾಗಿತ್ತು. ಅದಕ್ಕೆ ವಿಷಯ ಗಂಭೀರನಾಟಕ ಸರಣಿಯದೇ; ಅದೇ ಪಾತ್ರಗಳೂ ಹೌದು. ಆದರೆ ಕಥಾಸಂವಿಧಾನ ಪೂರ್ತಿ ಅಪಹಾಸ್ಯ ದಿಂದಲೂ ಗೇಲಿಯಿಂದಲೂ ಕೂಡಿರಬೇಕಿತ್ತು. ಬರಬರುತ್ತ ಟ್ರ್ಯಾಜಿಡಿ ಕೃಶ ವಾಗಿ ನಿಂತುಹೋಗಿ ನಾಟಕವೆಂದರೆ ವಿನೋದವೇ ಆಯ್ತು.

ಪ್ರಾಚೀನ ರೋಮನರು ನಾಟಕಕ್ಕೆ ಹೆಚ್ಚು ಆಸಕ್ತಿ ವಿನಿಯೋಗಿಸಲಿಲ್ಲ. ಆದರೆ ಹಾಸ್ಯಮಯವಾದ ವಿಡಂಬನೆ (Satire) ಅವರಿಗೆ ಒಗ್ಗಿ ಬಂದ ಸಾಹಿತ್ಯ ಪ್ರಭೇದವಾಯ್ತು. ಅವರ ಮಾದರಿಯನ್ನೇ ಅನುಸರಿಸಿ ಮುಂದಣ ಯೂರೋಪಿನ ಸಾಹಿತಿಗಳು ವಿಡಂಬನೆಗೆ ಹೆಚ್ಚು ವೈವಿಧ್ಯವನ್ನೂ ಕಾಂತಿಯನ್ನೂ ಕೂಡಿಸಿಕೊಟ್ಟರು.

ಮಧ್ಯಯುಗದಲ್ಲಿ ರೋಮನ್ ಕ್ಯಾಥೊಲಿಕ್ ಚರ್ಚಿನ ಬಿಗಿಹಿಡಿತದ ದೆಸೆಯಿಂದ ಸಾಹಿತ್ಯ ಸ್ವತಂತ್ರವಾಗಿ ಬೆಳೆಯಲಾಗಲಿಲ್ಲ. ಆದರೂ ಕುಶಲ ಮತಿಯ ಕವಿಗಳು ಮೃಗ ಕಥೆಗಳ ನೆವದಲ್ಲಿ ಪಾದ್ರಿಗಳ ಬೂಟಾಟಿಕೆ ಪವಾಡ ಗಳ ಮೋಸ ಮತಪ್ರಕ್ರಿಯೆಗಳ ಒಣ ಅಡಂಬರ ಮುಂತಾದುವನ್ನು ಹೃದ ಯಂಗಮವಾಗಿ ಅಪಹಾಸ್ಯ ಮಾಡಿದರು.

ಹೊಸಹುಟ್ಟಿನ ಯುಗ ಪ್ರಾರಂಭವಾದೊಡನೆ ಸಾಹಿತಿಗಳು ನಿರಾತಂಕ ದಿಂದ ಉಸಿರಾಡತೊಡಗಿದರು. ವಿನೋದನಾಟಕ ಮೊದಮೊದಲು ಪ್ರಾಚೀನರ ನಕಲಿಯಾಗಿದ್ದು ಬೇಗ ಬೇಗ ಸ್ವಂತಿಕೆಯನ್ನು ಗಳಿಸಿಕೊಂಡಿತು. ಇಂಗ್ಲೆಂಡಿನಲ್ಲಿ ಷೇಕ್ಸ್‌ಪಿಯರ್ ಮುಂತಾದವರೂ ಸ್ಪೇನಿನಲ್ಲಿ ಲೋಪ್ ಡ ವೀಗನೂ ಅದನ್ನು ರೂಢಿಸಿಕೊಂಡು ಹೆಸರಾಂತರು. ಕಥೆ ಕಾದಂಬರಿಗಳನ್ನೂ ಹಾಸ್ಯ ಆಕ್ರಮಿಸಿಕೊಂಡಿತು. ಸ್ಪೇನಿನ ಸರ್ವಾಂಟೀಸ್ ಬರೆದ "ಡಾನ್ ಕ್ವಿಕ್ಸೋಟ್".

ಫ್ರಾನ್ಸಿನ ರ್‍ಯಾಬಿಲೇ ಬರೆದ "ಪ್ಯಾಂಟಾಗ್ರುಯೆಲ್" ಮತ್ತು "ಗಾರ್ಗಾಂಟುವ" ಅವರ ಪುಸ್ತಕಗಳಾಗಿವೆ. ಹಾಸ್ಯ ಪರಿಹಾಸ ಅಪಹಾಸ್ಯ ಲೇಖನಿಗಳ ಮೂಲಕ ಜನಜೀವನದ ಸರ್ವ ಮುಖಗಳಿಗೂ ಅವು ಕನ್ನಡಿ ಹಿಡಿಯುತ್ತವೆ. ವಿನೋದ ನಾಟಕದಲ್ಲಿ ಫ್ರಾನ್ಸಿನ ಮೋಲಿಯೇರ್ ಎತ್ತಿದ ಕೈ.

೧೮,೧೯.೨೦ನೆಯ ಶತಮಾನದಲ್ಲಿ ಯೂರೋಪಿನಲ್ಲೂ ಅಮೇರಿಕದಲ್ಲೂ ಹಾಸ್ಯಲೇಖನ ತಳೆದ ಹತ್ತೆಂಟು ಪ್ರಕಾರಗಳನ್ನು ವಿವರಿಸುವುದಕ್ಕೆ ಅನೇಕ ಪುಟಗಳ ಹೊತ್ತಗೆ ಬೇಕಾದೀತು. ಸಣ್ಣಕಥೆ ನೀಳ್ಗತೆ ಕಾದಂಬರಿ ನಾಟಕಗಳಲ್ಲೇ ಅಲ್ಲದೆ ಪ್ರಬಂಧ ಕುಶಲ ಪತ್ರ ಪ್ರವಾಸಕಥೆ ದಿನಪತ್ರಿಕೆ ನಿಯತಕಾಲಿಕ ಚುಟುಕ ಕಿರು ಲೇಖನಗಳಲ್ಲೂ ಹಾಸ್ಯ ಬಗೆಬಗೆಯ ವೇಷ ಧರಿಸಿ ಕುಣಿದಾಡುತ್ತಿದೆ, ಜನರನ್ನು ನಗಿಸುತ್ತಿದೆ. ಬಾಳಿನ ಕಷ್ಟನಿಷ್ಠುರವನ್ನು ಭೀತಿ ಪಡದೆ ಎದುರಿಸುವುದಕ್ಕೆ ನೆರವಾಗುತ್ತಿದೆ.

ಹಾಸ್ಯದಲ್ಲಿ ಕ್ರೌರ್ಯ ಹೊಲಸು ಎರಡಕ್ಕೇ ಜಾಗವಿಲ್ಲ. ಇರಕೂಡದು. ಮಿಕ್ಕ ಯಾವ ವಿಷಯವಾದರೂ ಅದಕ್ಕೆ ಸಲ್ಲುತ್ತದೆ.

೨

"ಭರತೇಶ ವೈಭವ" ಎಂದು ಒಂದು ಕಾವ್ಯವಿದೆ. ಅದನ್ನು ಬರೆದ ಕವಿಯ ಹೆಸರು ರತ್ನಾಕರ. ಅದರಲ್ಲಿ ಮಗು ಅರ್ಕಕೀರ್ತಿಯ ವಿದ್ಯಾಭ್ಯಾಸ ಪ್ರಾರಂಭ ಆಗಲಿದೆ, ತಂದೆಯಾದ ಭರತ ಚಕ್ರವರ್ತಿಯೇ ಉಪಾಧ್ಯಾಯ. ಮಗನನ್ನು ತೊಡೆಯಮೇಲೆ ಕುಳ್ಳಿರಿಸಿಕೊಂಡು "ಈಗ ನಾನು ಹೇಳಿಕೊಟ್ಟಂತೆ ಹೇಳುತ್ತೀಯಾ?" ಎನ್ನುತ್ತಾನೆ. ಅರ್ಕಕೀರ್ತಿ "ಹೂಂ" ಎನ್ನುತ್ತಾನೆ. ಭರತ "ಸರಿ. ಹಾಗಾದರೆ ಹೇಳು : ಆದಿ ತೀರ್ಥಂಕರ!" ಎಂದು ಬೋಧಿಸುತ್ತಾನೆ. ಅರ್ಕಕೀರ್ತಿ "ಆದಿಂಕರ" ಎಂದು ಪಾಠ ಒಪ್ಪಿಸುತ್ತಾನೆ. ಭರತ ಮತ್ತೆ "ಚರಮಾಂಗ ಪುರುಷ!" ಎಂದು ಹೇಳಿಕೊಟ್ಟರೆ ಅರ್ಕಕೀರ್ತಿ "ಚಂಬರ್ ಪೂಷಾ" ಎಂದು ಪಾಠ ಒಪ್ಪಿಸುತ್ತಾನೆ. ಅದನ್ನು ಕೇಳಿದೊಡನೆ ಭರತನಿಗೂ ಆತನ ಅನ್ನ



ಮುಗ್ಧ ಹಾಸ್ಯ

ಮಂತ್ರಿಗಳಿಗೂ ಮುಸಿನಗು. ಕಾವ್ಯವನ್ನು ಓದುವ ನಮಗೂ ನಗು. ಭಾರಿ ಭಾರಿ ಪದಗಳನ್ನು ತಪ್ಪು ತಪ್ಪಾಗಿ ನುಡಿಯುವುದು ಎಳೆಯ ಕೂಸುಗಳಿಗೆ ಸಹಜ ; ತಾವು ನುಡಿಯುತ್ತಿರುವುದು ತಪ್ಪು ಎಂಬ ಅರಿವು ಇಲ್ಲ ಅವುಗಳಿಗೆ. ಅವುಗಳ ಉಚ್ಚಾರಣೆ ದೊಡ್ಡವರಲ್ಲಿ ನಗು ಹುಟ್ಟಿಸುತ್ತದೆ ; ಹರ್ಷವನ್ನು ತಂದುಕೊಡುತ್ತದೆ. ಚಿಕ್ಕ ಮಕ್ಕಳಿಗೆ ಸುಳ್ಳು ಕಪಟ ಮೋಸ ಯಾವುದೂ ಗೊತ್ತಿಲ್ಲ ; ಅವರ ಮನಸ್ಸು ಶುದ್ಧವಾದದ್ದು. ಆದ್ದರಿಂದ ಅವರನ್ನು "ದೇವರಿಗೆ ಸಮಾನ" ಎಂದು ಹೊಗಳುತ್ತೇವೆ ; "ಮುಗ್ಧರು" ಎಂದು ಕರೆಯುತ್ತೇವೆ. "ಮುಗ್ಧತೆ" ಬಹಳ ಒಳ್ಳೆಯ ಸದ್ಗುಣ. ಹರುಕುಮುರುಕಾದರೂ "ಆದಿಂಕರ", "ಚಿಂಬರ್ ಪ್ರೂಸಾ" ಎಂಬ ಬಾಲಭಾಷೆ ದಿಟವಾಗಿ ತುಂಬ ಸಿಹಿಯಾದದ್ದು, ತಿಳಿನಗುವನ್ನು ಎಬ್ಬಿಸುವಂಥಾದ್ದು. ಇಂಥ ಸರಳವೂ ಶುಚಿಯೂ ಆದ ನಗುವಿಗೆ ಸಂಬಂಧಿಸಿದ ಕ್ರಿಯೆಯೇ "ಮುಗ್ಧ ಹಾಸ್ಯ".

ಅಪ್ಪನೊ ಅಮ್ಮನೊ ಹೇಳಿದ್ದನ್ನು ಸತ್ಯವೆಂದೇ ನಂಬಿಬಿಡುವುದೂ ಮಕ್ಕಳ ಜಾಯಮಾನ. ಅದನ್ನು ಕವಿ ರುದ್ರಭಟ್ಟ ಚೆಲುವಾಗಿ ಬಳಸಿಕೊಂಡಿದ್ದಾನೆ. ಅವನ "ಜಗನ್ನಾಥ ವಿಜಯ"ದಲ್ಲಿ ಬಾಲಕೃಷ್ಣ ಒಂದು ದಿನ ಹಾಲು ಕುಡಿಯುವುದಿಲ್ಲವೆಂದು ಮೊಂಡಾಟ ಮಾಡುತ್ತಾನೆ. ಸಾಕುತಾಯಿ ಯಶೋದೆ ಅವನನ್ನು ಪುಸಲಾಯಿಸುವುದಕ್ಕೆ ಒಂದು ಉಪಾಯ ಹೂಡುತ್ತಾಳೆ : "ಇಲ್ಲಿ ನೋಡು, ಕೃಷ್ಣ. ನಮ್ಮ ಹಸು ನಂದಿನಿಯನ್ನು ನೀನು ಬಲ್ಲೆ ; ಚಿನ್ನದ ಘಂಟೆ ಕಟ್ಟಿಲ್ಲವೆ ಅದಕ್ಕೆ ! ಅದು ಕೊಟ್ಟಿರುವ ಹಾಲು ಇಲ್ಲಿದೆ. ಅಣ್ಣ ಬಲರಾಮ ಬರುವುದಕ್ಕೆ ಮುಂಚೆ ಇದನ್ನೆಲ್ಲ ಕುಡಿದುಬಿಡು. ಕುಡಿದುಬಿಟ್ಟರೆ ನಿನ್ನ ತಲೆ ಕೂದಲು ಉದ್ದವಾಗುತ್ತದೆ !" ಕೃಷ್ಣನಲ್ಲಿ ಆಸೆ ಮೂಡುತ್ತದೆ. ತಕ್ಷಣ ಅವನು ಬಟ್ಟಲನ್ನು ಬರಿದುಮಾಡಿ, ಕೇಳುತ್ತಾನೆ : "ಅಮ್ಮ, ಈಗ ನನ್ನ ಜುಟ್ಟು ಎಷ್ಟುದ್ದ ಬೆಳೆಯಿತು ?" ಆ ಮಾತನ್ನು ಕೇಳಿ ಯಶೋದೆಗೆ ತುಂಟನನ್ನು ಅಪ್ಪಿ ಮುದ್ದಾಡುವಷ್ಟು ಉಲ್ಲಾಸ ಆಗಿರಬೇಕು !

ಕವಿ ಷಡಕ್ಷರಿ ಬರೆದುಕೊಟ್ಟಿರುವ "ಕೋಳೂರು ಕೊಡಗೂಸಿ"ನ ಸಣ್ಣ ಕಥೆಯಲ್ಲೂ ನಿರ್ಮಲ ಹಾಸ್ಯವಿದೆ. "ಕೊಡಗೂಸು" ಎಂದರೆ ಚಿಕ್ಕ ಹುಡುಗಿ ಅಥವಾ ಕನ್ಯೆ. ಅವಳ ತಂದೆಗೆ ನಿತ್ಯವೂ ಊರಿನ ಕಲ್ಲಿನಾಥ ಲಿಂಗಕ್ಕೆ ಹಾಲನ್ನು ಅರ್ಪಿಸುವುದು ವ್ರತವಾಗಿತ್ತು. ಒಮ್ಮೆ ಹೆಂಡತಿಯೊಂದಿಗೆ ಬೇರೆ ಎಲ್ಲಿಗೋ ಹೋಗಿಬರಬೇಕಾದ ಪ್ರಮೇಯ ಅವನಿಗೆ ಒದಗಿತು. ನಿತ್ಯನೇಮಕ್ಕೆ ಮುದ್ದು ಮಗಳನ್ನು ಒಪ್ಪಿಸಿ ಪಯಣಗೊಂಡ. ಕೊಡಗೂಸು ಮಾರನೆಯ ದಿನ ನಿತ್ಯ

ವಾದ ಹಾಲನ್ನು ಬಟ್ಟಲಿನಲ್ಲಿ ತುಂಬಿಕೊಂಡು ಗುಡಿಗೆ ನಡೆದಳು. ಬಟ್ಟಲನ್ನು ಲಿಂಗದ ಮುಂದೆ ಇಟ್ಟು, "ದೇವ, ಹಸಿದಿದ್ದೀಯೆ ಹಾಲು ಕುಡಿ!" ಎಂದು ಪ್ರಾರ್ಥನೆ ಮಾಡಿ, ತಾನು ಕಂಭದ ಮರೆಯಲ್ಲಿ ನಿಂತುಕೊಂಡಳು. ಕೆಲನಿಮಿಷ ಕಳೆದಮೇಲೆ ಮರೆಯಿಂದ ಹೊರಬಂದು ನೋಡುತ್ತಾಳೆ : ಹಾಲು ಹಾಗೆಯೇ ಇದೆ! ಕಲ್ಲಿನಾಥ ಏತಕ್ಕೆ ಉಪೇಕ್ಷೆ ಮಾಡಿದ್ದಾನೆ? ಅವನಿಗೆ ಹಸಿವಾಗಿಲ್ಲವೆ? ಅಥವಾ ತನ್ನಿಂದ ಏನಾದರೂ ಅಪಚಾರ ಆಗಿದೆಯೆ? ಹೀಗೆ ಅವಳ ಚಿತ್ತದ ಪೂರ್ತಿ ಉಮ್ಮಳ. ಬಗೆಬಗೆಯಾಗಿ ತನ್ನ ದುಃಖವನ್ನು ಹೊರಗೆಡಹುತ್ತಾಳೆ : "ಅದೇಕಪ್ಪ ಹಾಲನ್ನು ಕಂಡು ಜಿಗುಪ್ಸೆ? ಸಾಕಷ್ಟು ಬಿಸಿಯಾಗಿಲ್ಲವೆ? ಹೆಚ್ಚಾಗಿ ಕಾದುಹೋಗಿದೆಯೆ? ಹೊಗೆ ಸುತ್ತಿಕೊಂಡು ವಾಸನೆಗೂಡಿದೆಯೆ? ಕಣ್ಣಿಗೆ ಸೊಗಸಾಗಿಲ್ಲವೆ? ಅಥವಾ ನಾನೇನಾದರೂ ಅಪರಾಧ ಮಾಡಿದೆನೆ? ಕೊಂಚ ರುಚಿ ನೋಡಬೇಕೆಂದು ನನ್ನ ಮನಸ್ಸು ಇಚ್ಛಿಸಿತೆ? ಇಲ್ಲ, ಕಲ್ಲಪ್ಪ, ಖಂಡಿತ ಇಲ್ಲ. ಮೀಸಲು ಕೆಟ್ಟುಹೋಯ್ತು? ಬಟ್ಟಲಿನ ಹಾಲನ್ನು ಇತರರಿಗೆ ಕಾಣಿಸಿಬಿಟ್ಟೆನೆ? ಅದು ಕಣ್ಣಂಜಲಾಯ್ತು? ಏನೂ ಆಗಿಲ್ಲದಿದ್ದರೆ, ಏತಕ್ಕೆ ಕುಡಿಯಲೊಲ್ಲೆ?" ಹೀಗೆ ಹಲುಬಿ, ಹಲುಬಿ, ನಂತರ "ನನ್ನ ಮಾತು ಕೇಳು. ನಿನಗೆ ಬೇಕಾದಷ್ಟು ಸಕ್ಕರೆ ಜೇನುತುಪ್ಪ ಬಾಳೆಯಹಣ್ಣು ತಂದುಕೊಡುತ್ತೇನೆ; ಮೃಷ್ಟಾನ್ನವನ್ನೂ ಬಡಿಸುತ್ತೇನೆ" ಎನ್ನುತ್ತ ಅಪೇಕ್ಷೆ ಕೆರಳಿಸಲು ಯತ್ನಿಸುತ್ತಾಳೆ. ಕೊನೆಯದು : "ಇನ್ನೊಂದು ವಿಚಾರ ಹೇಳುತ್ತೇನೆ, ಕಿವಿಗೊಟ್ಟು ಕೇಳು. ನಮ್ಮಯ್ಯ ನನಗೆ ತಂದುಕೊಡುವ ಆಭರಣ ಎಲ್ಲವನ್ನೂ ನಿನಗೆ ಕೊಟ್ಟುಬಿಡುತ್ತೇನೆ. ಅಷ್ಟೇ ಅಲ್ಲ, ವೀರಭದ್ರನ ತೇರು ಇನ್ನೇನು ಬರುತ್ತದೆ, ನನ್ನನ್ನು ಕರೆದುಕೊಂಡು ಹೋಗುತ್ತಾರೆ; ನನ್ನ ಜೊತೆ ನೀನು ಬರುವಿಯಂತೆ!" ಯಾವುದಕ್ಕೂ ಸಗ್ಗದ ಕಲ್ಲಿನಾಥ ಸುಮ್ಮನೆ ಇದ್ದ. ವಿಪರೀತ ವ್ಯಥೆಯಿಂದ ಕೊಡಗೂಸು ಸಾಯುವುದಕ್ಕೆ ಸಿದ್ಧಳಾದಳು. ಆಗ ಈಶ್ವರ ಪ್ರತ್ಯಕ್ಷನಾಗಿ ಹಾಲನ್ನು ಕುಡಿದನಂತೆ! ಅಷ್ಟಕ್ಕೇ ಅವನನ್ನು ಆ ಹೆಣ್ಣು ಬಿಟ್ಟುಗೊಡಲಿಲ್ಲ. "ಕಲ್ಲಯ್ಯ, ಇಂಥ ಆಟ ನಿನಗೆ ಸರಿಯೆ, ಹೇಳು? ಹುಡುಗಿ, ಚಿಕ್ಕವಳು. ಎಂದು ಕನಿಕರ ತೋರದೆ ಇಷ್ಟು ಹೊತ್ತು ನನ್ನನ್ನು ಗೋಳುಗುಟ್ಟಿಸಬಹುದೆ? ಇರಲಿ; ನಮ್ಮಯ್ಯ ಬರಲಿ; ನಿನ್ನ ಮೇಲೆ ದೂರು ಹೊರಿಸುತ್ತೇನೆ; ನಿಮ್ಮಿಬ್ಬರ ವ್ಯಾಜ್ಯ ಇಲ್ಲಿಗೇ ಮುಗಿದಿಲ್ಲ!" ಎನ್ನುತ್ತಾಳೆ. ಅವಳು ಮನೆಗೆ ಹಿಂತಿರುಗಿದ ಮೇಲೆ ಪಾರ್ವತಿ ಈಶ್ವರನಿಗೆ ಪ್ರಶ್ನೆ ಹಾಕಿದಳಂತೆ : "ಏನೂ ತಪ್ಪು ಮಾಡದ ಆ ಸಣ್ಣ ಪ್ರಾಣಿಗೆ ಅದೇತಕ್ಕೆ ಅಷ್ಟು ಹೊತ್ತು ಕಾಟ

ಕೊಟ್ಟೆ ?" ಈಶ್ವರನ ಉತ್ತರ ಹೀಗಿತ್ತಂತೆ : "ಅವಳ ಮಾತು ಹಾಲಿಗಿಂತ ಹೆಚ್ಚು ಸವಿಯಾಗಿತ್ತು ನನಗೆ. ಇನ್ನಷ್ಟು ಆಲಿಸೋಣ, ಇನ್ನಷ್ಟು ಆಲಿಸೋಣ ಎಂಬುವಂತಿತ್ತು !"

ವಯಸ್ಕರಲ್ಲಿಯೂ ಹಲಕೆಲವರು ಕಪಟ ಕುಯುಕ್ತಿ ಏನನ್ನೂ ಅರಿಯದ ನೇರ ಸ್ವಭಾವದವರಾಗಿರುತ್ತಾರೆ. ಅವರನ್ನು ಸೀದಾ ಮನುಷ್ಯರು ಎನ್ನುತ್ತೇವೆ. ಕವಿ ನೇಮಿಚಂದ್ರ ಚಿತ್ರಿಸಿರುವ ನಂದಗೋಪ ಅಂಥವರಲ್ಲಿ ಒಬ್ಬ. ಗೋಕುಲದ ಗೌಳಿಗರಿಗೆ ಅವನು ಒಡೆಯ. ಅವನ ಹೆಂಡತಿ ಯಶೋದೆ. ಅವಳಿಗೆ ಒಂದು ಹೆಣ್ಣು ಮಗು ಹುಟ್ಟಿತು. ಗಂಡುಮಗು ಪಡೆಯುವ ಬಯಕೆ ಅವಳಲ್ಲಿ ಬಲವಾಗಿತ್ತು. ಅದಕ್ಕೋಸ್ಕರ ಅವಳು ಗ್ರಾಮದೇವತೆಗೆ ಹರಕೆ ಹೊತ್ತು ಯಥೇಚ್ಛ ಕಾಣಿಕೆ ಸಲ್ಲಿಸಿದ್ದಳು. ಹೆಣ್ಣು ಮಗು ಜನಿಸಿದ್ದಕ್ಕಾಗಿ ಅವಳಿಗೆ ವಿಷಾದ ; ಅವಳ ಗಂಡ ನಂದಗೋಪನಿಗೆ ಕೋಪ. ಕೂಸನ್ನು ಗುಡಿಗೆ ತೆಗೆದುಕೊಂಡು ಹೋಗಿ ದೇವತೆಯ ಮುಂದಿರಿಸಿ ಹೀಗೆ ಆರ್ಭಟಿಸಿದ : "ಎಲೆ ದೇವಿ, ನೀನೆಂಥ ಮೋಸಗಾತಿ ! ನನ್ನ ಹೆಂಡತಿ ಗಂಡು ಶಿಶುವನ್ನು ಬೇಡಿ ನಿನಗೆ ಬೇಕಾದಷ್ಟು ಭರ್ಜರಿ ಒಡವೆ ವಸ್ತ್ರವನ್ನು ಅರ್ಪಿಸಿದಳು. ನೀನಾದರೋ ಪ್ರತಿಯಾಗಿ ಈ ಹುಳತ ಹೆಣ್ಣು ಕೂಸನ್ನು ಕೊಟ್ಟಿದ್ದೀಯೆ. ಅದು ಅವಳಿಗೆ ಬೇಡ. ನೀನೂ ಹೆಣ್ಣಾದ್ದರಿಂದ ಬಹುಶಃ ಹೆಣ್ಣನ್ನು ಕೊಟ್ಟಿರುವೆ ! ನೀನೇ ಅದನ್ನು ತೆಗೆದುಕೊ. ನಮಗೆ ಗಂಡು ಬೇಕು. ಕದ್ದಾದರೂ ತಂದುಕೊಡು. ಇಲ್ಲದಿದ್ದರೆ ನಿನಗೆ ಒಪ್ಪಿಸಿದ ಮುಡಿಪೆಲ್ಲವನ್ನೂ ಹಿಂದಕ್ಕೆ ತೆತ್ತುಬಿಡು. ನಿನ್ನನ್ನು ಈ ಮನೆಯಲ್ಲಿ ಮಲಗಿರಲೂ ಬಿಡುವುದಿಲ್ಲ, ಕುಳ್ಳಿರಲೂ ಬಿಡುವುದಿಲ್ಲ. ನಾನೇನು ಸಾಮಾನ್ಯನೆ ? ಕರಿಯ ಬಂಡೆಯನ್ನು ತಂದು ನಿನ್ನ ಮಂಡೆಗೆ ಹೊರಿಸುತ್ತೇನೆ ; ಸೂಲಗಾತಿಯೆಂದು ಪ್ರಕಟಿಸುತ್ತೇನೆ ; ದನಕಾಯುವ ಹೆಂಗಸರನ್ನು ಜೊತೆಗೆ ಕರೆದುಕೊಂಡು ಬಂದು, ನೀನು ನುಣ್ಣಗೆ ನುಂಗಿದ್ದನ್ನೆಲ್ಲ ನಿನ್ನ ಮೂಗಿನಿಂದಲೂ ಬಾಯಿಯಿಂದಲೂ ಕಕ್ಕಿಸಿಬಿಡುತ್ತೇನೆ. ಜೋಕೆ, ಬೇಗ ಮತ್ತೆ ಬರುತ್ತೇನೆ !" ಪ್ರಸಂಗ ಸಮರ್ಪಕವಾಗಿ ಮುಕ್ತಾಯಗೊಳ್ಳುತ್ತದೆ. ವಸುದೇವ ತನ್ನ ಹೆಂಡತಿ ಹೆತ್ತಿರುವ ಕೃಷ್ಣನನ್ನು ರಕ್ಷಿಸುವುದಕ್ಕೋಸ್ಕರ ಅಲ್ಲಿಗೆ ಅವನನ್ನು ಎತ್ತಿಕೊಂಡು ತಂದು ಗ್ರಾಮದೇವತೆಯ ವಿಗ್ರಹ ಹಿಂದೆ ಬಚ್ಚಿಟ್ಟುಕೊಂಡಿದ್ದ. ನಂದಗೋಪ ಗುಡುಗುತ್ತ ಹೊರಹೊರಟ ಕೂಡಲೆ ಮರೆಯಿಂದ ಈಚೆ ಬಂದು ಕೃಷ್ಣನನ್ನು ದೇವತೆಯ ಮುಂದೆ ಮಲಗಿಸಿದ ; ಅಲ್ಲಿದ್ದ ಹೆಣ್ಣುಕೂಸನ್ನು ಎತ್ತಿಕೊಂಡು ತನ್ನ ಮನೆಗೆ ದೌಡಾಯಿಸಿದ. ನಂದ

ಗೋಪ ತಿರುಗಿ ಬಂದಾಗ ಗುಂಡುಮಗುವನ್ನು ಕಂಡು ನಲಿದಾಡಿ ಅದನ್ನು ಅಕ್ಕರೆಯಿಂದ ತಂದು ಯಶೋದೆಯ ತೊಡೆಯಮೇಲಿಟ್ಟ.

೭

ಹಳ್ಳಿಗಾಡಿನವರ ಕಥೆ ಕವಿತ್ವಗಳಲ್ಲಿ ದೇವತೆಗಳನ್ನು ಕುರಿತು ಆಗಾಗ ಸರಸವಾದ ಪರಿಹಾಸ ಎದ್ದುಬರುವುದನ್ನು ಕಾಣಬಹುದು. ಈ ವಾಕ್ಯಗಳನ್ನು ನೋಡಿ : "ಗಣಪ್ಪ ಬಾರೊ ಗಣಪತಿ ಬಾರೊ । ಡೊಳ್ಳೊಟ್ಟೆ ಎತ್ಕೊಂಡು ಕುಣೆಯುತ್ತ ಬಾರೊ ॥", "ಡೊಂಕು ಮೋರೆಯ ಹನುಮ ನೋಡೋಕೆ ಬಲು ಚೆಲುವ । ಟೊಂಕದ ಮೇಲೆ ಬಲಗೈಯ ; ಇಟ್ಕೊಂಡು । ಲಂಕ್ಯಾಕ್ಕೆ ಲಾಗ ಒಗೆದಾನೊ ॥". ಗಣೇಶ ಹನುಮಂತ ಇವರನ್ನು ಹಳ್ಳಿಯವರು ಡಿಳ್ಳಿಯವರು ಎಲ್ಲರೂ ದೇವರಂತೆ ಪೂಜಿಸುತ್ತಾರೆ ; ಆದರೆ ಅವನ ಹೊಟ್ಟೆ ಡುಬ್ಬು ಇವನ ಸೊಟ್ಟ ಮೂತಿಯನ್ನು ಕಂಡಾಗ ಅವರೂ ನಮ್ಮ ಹಾಗೆ ಮನುಷ್ಯರು ಎಂಬ ಭಾವನೆ ಉಂಟಾಗಿ ಸರಸ ವಿನೋದ ಏಳುತ್ತದೆ. ಅದಂ ಕೇವಲ ವಿನೋದ ; ರವೆಯಷ್ಟೂ ತಿರಸ್ಕಾರ ಆದರಲ್ಲಿ ಇಲ್ಲ. ದೇವರುಗಳನ್ನು ಪರಿಹಾಸಕ್ಕೆ ಒಳಗಾಗಿಸುವ ಮಂದಿ ಬರಿ ಮನುಷ್ಯರನ್ನು ಸುಮ್ಮನೆ ಬಿಟ್ಟಾರೆ ? ಜನತೆಯ ಕವಿ ಒಬ್ಬ ಬಲು ದಪ್ಪವಾದ ಹೆಂಗಸನ್ನು ಹೀಗೆ ಕುಚೋದ್ಯ ಮಾಡಿದ್ದಾನೆ : "ಅಮ್ಮ ನಿಮ್ಮ ಮೈಯಿ ಮಂದರ ಪರ್ವತ । ಅಮ್ಮ ಹೆಂಗೆ ಬಂದ್ರಿ ನಡ್ಕೊಂಡು । ಮಣಭಾರ । ಅಮ್ಮ ನಿಮ್ಮ ಮೈಯಿ ಹೊತ್ಕೊಂಡು ॥" ಅಂಗವಿಕಾರಗಳನ್ನು ಕುರಿತ ಹಾಸ್ಯ ಏನೆಂದರೂ ಕೊಂಚ ಒರಟು. ಪಂಪ ಕವಿಯ ಶಿಶುಪಾಲ ವೃದ್ಧ ಭೀಷ್ಮನನ್ನು "ಈತನಿಗೆ ತುಂಬ ನರೆಕೂದಲು ಡೊಳ್ಳು ಹೊಟ್ಟೆ ಇದ್ದರೂ ಇವನು ಅವಿವೇಕಿ !" ಎಂದು ಹಳಿಯುತ್ತಾನೆ. ದೇಹದ ಕುರೂಪವನ್ನು ಬಣ್ಣಿಸುವಾಗ ಕವಿಗಳು ಇರುವುದಕ್ಕಿಂತ ಹೆಚ್ಚಾಗಿಯೇ ವರ್ಣಿಸುತ್ತಾರೆ. ಕನಕದಾಸನ "ನಳಚರಿತ್ರೆ"ಯಲ್ಲಿ ಕರ್ಕೋಟಕನೆಂಬ

ವಿಷಸರ್ಪ ನಳನ ಕೈಯನ್ನು ಕಚ್ಚಿಬಿಡುತ್ತದೆ : ಅದರಿಂದ ನಳನ ಸುಂದರ ಶರೀರ ಈ ವಿಧದಲ್ಲಿ ರೂಪುಗೆಟ್ಟಿತಂತೆ :

ದೊಡ್ಡ ಹೊಟ್ಟೆಯು ಗೂನುಬೆನ್ನಿನ
ಸೊಡ್ಡು ಮೋರೆಯು ಗಂಟುಮೂಗಿನ
ಗಿಡ್ಡು ಕೈಕಾಲುಗಳ ವುದುರಿದ ರೋಮ ಮೀಸೆಗಳ ।
ಜಡ್ಡು ದೇಹದ ಗುಜ್ಜುಗೊರಲಿನ
ಮುಡ್ಡಿರೂಪಿನ ಹರುಕುಗಡ್ಡದ
ಹೆಡ್ಡನಾದ ಕುರೂಪಿತನದಲ್ಲಿ ನೃಪತಿ ವಿಷದಿಂದ ॥

(ಸೊಡ್ಡು = ಸೊಟ್ಟ, ವಿಕೃತ ; ಮುಡ್ಡಿ = ಮುಂಕು ; ನೃಪತಿ – ರಾಜ)

ಜನ್ನನೆಂಬ ಕವಿ ಮಾವಟಿಗನೊಬ್ಬನ ಆಕಾರ ಹೀಗೆ ಇದ್ದಿತೆಂದು ಹೇಳಿದ್ದಾನೆ :

ಮುದಿಕರಡಿಯು ಮುದಿತೊಗಲಿನಂದದ ಕರಿಯು
ತಾಳೆಕಾಯಿನ ಗೊಂಚಲಿನಂಥ ಗೂನ
ಒಣಗಿದ ಕೊರಡಿನಂದದ ವಕ್ರ
ಟೊಂಕ ಮುರಿದ ಕತ್ತೆಯು ಕಾಲಿನಂಥ ಕಾಲು ॥

ಅವನ ಹೆಸರೇ "ಅಷ್ಟಾವಕ್ರ" !

ಅವಲಕ್ಷಣವಾದ ನಡವಳಿಕೆಯೂ ಹಾಸ್ಯಾಸ್ಪದವಾಗುತ್ತದೆ. 'ವಿದೂಷಕ', 'ಕೋಡಂಗಿ', 'ಹನುಮನಾಯಕ' ಮುಂತಾದ ಹಾಸ್ಯಗಾರರು ಅಕಟವಿಕಟ ಮಾತುಗಳನ್ನಾಡಿ ಅಂಕಡೊಂಕವಾಗಿ ನಡೆದು ಸಭಿಕರು ನಗುವಂತೆ ಮಾಡುತ್ತಾರೆ ; ನಗು ಬರಿಸುವುದೇ ಅವರ ಕಸಬು. ಹರಿಹರನೆಂಬ ಕವಿ ಕೋಡಂಗಿಯ ಆಟವನ್ನು ಹೀಗೆ ವಿವರಿಸಿದ್ದಾನೆ : "ಕಣ್ಣುಗುಡ್ಡೆ ಹೊರಳಿಸುತ್ತ, ಜುಟ್ಟು ಅಲ್ಲಾಡಿಸುತ್ತ, ಹಲ್ಲುಕಿರಿದು ಹುಬ್ಬೆಬ್ಬಿಸಿ ಕಿವಿ ಅಡಿಸಿದ ; ಅಗಲವಾಗಿ ಬಾಯಿ ತೆರೆದು ಗಹಗಹಿಸಿ ನಕ್ಕ. ಕೈಯನ್ನು ಹಾಗೆ ಹೀಗೆ ಮಾಡಿಸುತ್ತ ವಕ್ರವಕ್ರವಾಗಿ ಕಾಲೆಳೆಯುತ್ತ ಮುಂಡಿಬಗ್ಗಿಸಿ ನಮಸ್ಕರಿಸುತ್ತ ಏನೇನೊ ಬಯ್ಯುತ್ತ ತಮಾಷೆ ನಡೆಸಿದ." ಹೆಂಡ ಕುಡಿದವರ ನಡೆನುಡಿಯೂ ಇದೇ ರೀತಿ ವಿಚಿತ್ರವಾಗಿರುತ್ತದೆ. ಒಬ್ಬ ಕವಿಯ ವಿವರಣೆ ಹೀಗಿದೆ : "ಬರಿ ಗಾಳಿ

ಯನ್ನು ಮಾತಾಡಿಸುತ್ತಾರೆ ; ಹಾರಾಡುವ ಹಕ್ಕಿಯನ್ನು ಕಂಡು ವೇಷಗಾರ ಎನ್ನುತ್ತಾರೆ : ಬಗುಳುವ ನಾಯಿಗೆ ಮುತ್ತು ಕೊಡಲು ಇಚ್ಛಿಸುತ್ತಾರೆ ; ಹುಚ್ಚನಿಗೆ ಬುದ್ಧಿ ಕಲಿಸ ಹೋಗುತ್ತಾರೆ ; ಉಟ್ಟ ಧೋತ್ರವನ್ನು ಬಿಚ್ಚಿ ತಲೆಗೆ ಸುತ್ತಿಕೊಳ್ಳುತ್ತಾರೆ ; ಕಾಡುಕೋಳಿಯಂತೆ ಕೂಗುತ್ತಾರೆ ; ಹೆಂಡದ ಅಮಲಿನ ಸೊಕ್ಕೇ ಸೊಕ್ಕು !" ಇದೆಲ್ಲ ಸರಿ. ಆದರೆ ದೇಹದ ವಿಕಾರವನ್ನೊ ಅಂಗಚೇಷ್ಟೆಯನ್ನೊ ನೋಡಿ ನಗುವುದು ಒರಟಾದ ಹಾಸ್ಯ ಎನ್ನಿಸಿಕೊಳ್ಳುತ್ತದೆ. ಸಭ್ಯರಾದವರು ನಯ ಹಾಸ್ಯವನ್ನೇ ಬಯಸಬೇಕು. ಮೆಚ್ಚಬೇಕು. ನಾಗರಿಕತೆ ಬೆಳೆಯುತ್ತ ಹೋದಂತೆ ಜನರ ಪರಸ್ಪರ ವರ್ತನೆಯಲ್ಲಿ ನಯವಿನಯವೂ ಹೆಚ್ಚಾಗುತ್ತದೆ.

ಬಡಾಯಿ ಕೊಚ್ಚುವುದು ಕೆಲವರಿಗೆ ಒಗ್ಗಿಬಂದ ಗುಣ. ತಮ್ಮಲ್ಲಿ ಎಷ್ಟೊ ಶಕ್ತಿ ಎಷ್ಟೊ ಸಾಮರ್ಥ್ಯ ಉಂಟೆಂದು ನಂಬಿಕೊಂಡು, ಅಂಥ ಸಾಹಸ ಇಂಥ ಸಾಹಸ ತಮಗೆ ಸಾಧ್ಯವೆಂದು ಜಂಭದ ಹರಟೆ ಹೊಡೆಯುತ್ತಾರೆ. ಕಾರ್ಯದಲ್ಲಾದರೊ ಒಂದಿಷ್ಟನ್ನೂ ಮಾಡಲಾರದೆ ಸೋತು ನಗೆಗೆ ಈಡಾಗುತ್ತಾರೆ. "ಉತ್ತರನ ಪೌರುಷ" ಎಂಬ ಗಾದೆ ಮಾತನ್ನು ನೀವು ಕೇಳಿರಬಹುದು. ಅದೇನು ಪೌರುಷ ಅವನು ಕೊಚ್ಚಿದ್ದು ? ಯಾವರೀತಿ ಅವನು ಅಪಹಾಸ್ಯಕ್ಕೆ ಗುರಿಯಾದ ? ಆ ವೃತ್ತಾಂತ ಒಂದು ರುಚಿಯಾದ ಕಥೆ ; ಅದನ್ನು ಕುಮಾರ ವ್ಯಾಸನ "ಭಾರತ"ದಲ್ಲಿ ಓದಿ ಆನಂದಪಡತಕ್ಕದ್ದು. ಅದರ ಸಾರಾಂಶವನ್ನು ಇಲ್ಲಿ ತಿಳಿದುಕೊಳ್ಳೋಣ. ಜೂಜಿನಲ್ಲಿ ಸೋತ ಪಾಂಡವರು ಯಾರಿಗೂ ಗೊತ್ತಾಗದಂತೆ ಒಂದು ವರ್ಷ ಪೂರ್ತ ತಲೆಮರೆಸಿಕೊಂಡು ಇರಬೇಕಾಗಿ ಬಂತು. ಮತ್ಸ್ಯಪುರದ ವಿರಾಟರಾಜನ ಆಶ್ರಯದಲ್ಲಿ ಇದ್ದರು. ಕೌರವ ಅದನ್ನು ಊಹಿಸಿಕೊಂಡು ಅವರ ಗುಟ್ಟನ್ನು ಬಯಲುಮಾಡುವುದಕ್ಕೆ ಮತ್ಸ್ಯ ಪುರದ ಬಳಿಗೆ ಸೈನ್ಯದೊಡನೆ ಬಂದ. ಹಸುಮಂದೆಗಳನ್ನು ಹಿಡಿದ. ದಕ್ಷಿಣ ದಿಕ್ಕಿನ ಧಾಳಿಯನ್ನು ತಡೆಯಲು ವಿರಾಟ ಹೊರಟ. ಆಗ ಕೌರವನ ಇನ್ನೊಂದು ಪಡೆ ಉತ್ತರ ದಿಕ್ಕಿನಲ್ಲಿ ಆಕ್ರಮಣ ಪ್ರಾರಂಭಿಸಿತು. ದನ ಕಾಯುವವ ಓಡಿಬಂದು ಅರಮನೆಯಲ್ಲಿದ್ದ ರಾಜಕುಮಾರ ಉತ್ತರನಿಗೆ ಸುದ್ದಿ ತಿಳಿಸಿದ. ಹಾಗು "ಏಳು, ಒಡೆಯ, ಶೂರನಾಗು ; ಯುದ್ಧಮಾಡು !" ಎಂದು ಬೇಡಿಕೊಂಡ. ಅಂತಃಪುರದ ಹೆಣ್ಣುಗಳ ಮಧ್ಯೆ ಮುಂಡಿಸಿದ್ದ ಉತ್ತರ ಕತ್ತಿ ಬಿಲ್ಲು ಬಾಣ ಮೊದಲಾದ ಆಯುಧಗಳ ಗೋಜಿಗೆ ಹೆಚ್ಚಾಗಿ ಹೋದವನಲ್ಲ. ಕಾಳಗವನ್ನು ಕಂಡವನಲ್ಲ. ದನಕಾಯುವವನ ಹೊಗಳಿಕೆಯಿಂದ ತಾನೊಬ್ಬ



ಉತ್ತರನ ಪೌರುಷ

ವೀರನೆಂದೇ ಭಾವಿಸಿಕೊಂಡ. ಹೆಂಗಸರ ಮುಖವನ್ನು ನೋಡುತ್ತ ಗರ್ವದ ವಾಕ್ಯಗಳನ್ನು ಗಟ್ಟಿಯಾಗಿ ಗಳಹಿದ: "ಏನು, ಕೌರವ ನನ್ನ ಮೇಲೆ ಕೈ ಮಾಡಲು ಬಂದಿದ್ದಾನೆಯೆ? ನಮ್ಮನ್ನು ಬಡ ಪಾಂಡವರು ಎಂದು ತಿಳಿದು ಕೊಂಡನೊ? ಕಪಟ ದ್ಯೂತದಲ್ಲಿ ಅವರನ್ನು ಸೋಲಿಸಿದವನು ಕದನದಲ್ಲಿ ನನ್ನನ್ನು ಸೋಲಿಸಬಲ್ಲನೆ? ಎಲವೊ, ಕೌರವ, ಸಿಂಹವನ್ನು ಕೆಣಕಬಹು ದೇನೋ? ಭೈರವನ ದಾಡಿಯನ್ನು ಎಳೆಯಬಹುದೇನೊ? ಇರು, ಇರು. ಸ್ವಲ್ಪದರಲ್ಲಿ ನಾನು ಬರುತ್ತೇನೆ. ಮೊದಲು ನಮ್ಮ ತುರು ಕರುಗಳನ್ನು ಊರಿಗೆ ಹಿಂತಿರುಗಿಸುತ್ತೇನೆ. ಆಮೇಲೆ ನಿನ್ನನ್ನೂ ನಿನ್ನ ಸೇನೆಯನ್ನು ಓಡಿಸಿ ಕೊಂಡು ನಿನ್ನ ರಾಜಧಾನಿ ಹಸ್ತಿನಾವತಿಗೆ ಮುತ್ತಿಗೆ ಹಾಕುತ್ತೇನೆ. ನಾನಾರು ಗೊತ್ತಿಲ್ಲವೆ ನಿನಗೆ?" ಆಗ ಇನ್ನೊಂದು ಆಲೋಚನೆ ಅವನಿಗೆ ಉಂಟಾಗುತ್ತದೆ. "ರಣಪರಾಕ್ರಮಿ ನಾನು, ಯಾರ ಮೇಲೆ ಯುದ್ಧಮಾಡಲಿ? ಕೌರವನೊ ನೀಚ: ಅರಸನಾಗಿದ್ದು ದನಗಳನ್ನು ಸೆರೆಹಿಡಿದಿದ್ದಾನೆ. ಅವನ ಜೊತೆ ಬಂದಿರು ವವರೆಲ್ಲ ನನ್ನ ಎದುರಿಗೆ ನಿಲ್ಲಲಾರದ ಅಧಮರು, ಭೀಷ್ಮ ಮುಪ್ಪಿನ ಮುದುಕ; ದ್ರೋಣ ತಿರುಪೆಯ ಹಾರುವಯ್ಯ; ಕರ್ಣ ಕೀಳು ಕುಲದವನು; ಇನ್ನು ಯಾರಿದ್ದಾರೆ ನನ್ನೊಂದಿಗೆ ಸೆಣಸುವುದಕ್ಕೆ?" ಅಷ್ಟರಲ್ಲಿ ತನ್ನ ಒಂದು ಆಕಸ್ಮಿಕ ಕೊರತೆ ಜ್ಞಾಪಕಕ್ಕೆ ಬರುತ್ತದೆ. "ಅಯ್ಯೊ, ಮರೆತಿದ್ದೆ: ನನ್ನ ಸಾರಥಿ ನಿನ್ನೆ ಸತ್ತುಬಿದ್ದ. ಬೇರೊಬ್ಬ ಸಾರಥಿಯನ್ನು ಶಿವ ಕೊಟ್ಟರೆ ಈಗಲೇ ಯಮನ ಪಟ್ಟಣವನ್ನು ಗಿಡಿದು ತುಂಬಿಸಿಬಿಟ್ಟೇನು; ಭೂತ ಭೇತಾಳರಿಗೆ ಹಬ್ಬದೂಟ ಒದಗಿಸಿಕೊಟ್ಟೇನು!" ಉತ್ತರನ ತಂಗಿ ಉತ್ತರೆಗೆ ಕುಣಿತ ಕಲಿಸುವವನ ವೇಷ ದಲ್ಲಿದ್ದ ಅರ್ಜುನ ತನಗೆ ಸಾರಥಿತನ ಗೊತ್ತೆಂದು ಅವಳ ಮೂಲಕ ಹೇಳಿ ಕಳಿಸಿದ. ಉತ್ತರ ಹಿಗ್ಗಿದ. "ತಂಗಿ, ಸಾರಥಿಯನ್ನು ಸಂಪಾದಿಸಿಕೊಟ್ಟು ನನ್ನನ್ನು ಉಳಿಸಿದೆ. ಇನ್ನು ತಡಮಾಡದೆ ಕೌರವನ ಕರುಳನ್ನು ಬಗೆದು ಬಿಸಾಡುತ್ತೇನೆ! ಎಂದು ಆಟಾಟೋಪಮಾಡಿದ. ಅರ್ಜುನ ರಥವನ್ನು ವೇಗ ವಾಗಿ ನಡೆಸಿದ. ರಣಭೂಮಿ ಹತ್ತಿರವಾಯ್ತು; ಕೌರವಸೇನೆ ಕಾಣಬಂತು. ಉತ್ತರನಲ್ಲಿ ಬೆರಗೂ ಭೀತಿಯೂ ಒಟ್ಟಿಗೆ ಉಲ್ಬಣಿಸಿದುವು. ಅಂಗೈನಿಂದ ಕಣ್ಣುಗಳನ್ನು ಮುಚ್ಚುತ್ತ ಹೀಗೆಂದ: "ಆಹಾ, ಇದೇನು ಸೈನ್ಯವೊ ಉಕ್ಕುವ ಮಹಾಸಾಗರವೊ! ಇವರೇನು ಕಾದಾಳುಗಳೊ ಯಮಭಟರ ಗುಂಪೊ! ಇದು ಆಯುಧಗಳ ಹೊಳಪೊ ಕಾಲರುದ್ರನ ಹಣೆಗಣ್ಣಿನ ಜ್ವಾಲೆಯೊ!" ಹೆದರಿ ಹಣ್ಣಾಗಿ ಸಾರಥಿಗೆ ಅಪ್ಪಣೆ ಮಾಡಿದ ಹೀಗೆ: "ನಾನೊಂದು ಕುರಿ, ಹಸಿದ

ವಾರಿಗಳ ಮುಂದೆಗೆ ನುಸುಳಿ ಬಂದುಬಿಟ್ಟೆ. ಬಹಳ ತಪ್ಪಾಯ್ತು, ಸಾರಥಿ. ರಥವನ್ನು ಹಿಂದಿರುಗಿಸು ; ಶತ್ರುಗಳಿಗೆ ತಿಳಿಯದಂತೆ ಪಯಣಿಸಿ ಮನೆ ಸೇರಿಕೊಳ್ಳೋಣ." ಅರ್ಜುನ ಆ ಮಾತನ್ನು ಕೇಳಿಸಿಕೊಳ್ಳಲಿಲ್ಲ ; ರಥ ಮುಂದು ಮುಂದಕ್ಕೆ ಚಲಿಸಿತು. ಉತ್ತರ ಮೆಲ್ಲಮೆಲ್ಲಗೆ ಹಿಂದಕ್ಕೆ ತೆವಳಿ ಕೆಳಕ್ಕೆ ಧುಮುಕಿ ನಿಟ್ಟೋಟದಿಂದ ಊರಿನ ಕಡೆಗೆ ಓಡಿಹೋದ. ಅರ್ಜುನ ರಥದಿಂದ ಇಳಿದು ಉದ್ದುದ್ದ ದಾಪು ಹಾಕಿ ಅವನನ್ನು ಹಿಡಿದು ತಂದ : ರಥದ ಮೇಲೆ ಕೂರಿಸಿದ. ಅವರಿಬ್ಬರ ನಡುವೆ ಈ ಸಂವಾದ ಜರುಗಿತು :

ಅರ್ಜುನ : ಇದೇನು ನಿನ್ನ ಕೃತ್ಯ ? ಕ್ಷತ್ರಿಯನೆ ನೀನು ? ಹೆಂಗಸರ ಎದುರಿನಲ್ಲಿ ದಿಟ್ಟನಂತೆ ಮಾತಾಡಿದೆ : ಈಗ ಪಲಾಯನ ಮಾಡಬೇಕೆಂದು ಇದ್ದೀಯೆ. ವಿರಾಟವಂಶವನ್ನು ಕೆಡಿಸುತ್ತಿರುವೆ.

ಉತ್ತರ : (ತಲೆಬಗ್ಗಿಸಿ) ಬಿಟ್ಟು ಕಳಿಸು, ಸಾರಥಿ ; ನಿನ್ನ ದಮ್ಮಯ್ಯ. ನನ್ನನ್ನು ಸಾಯಿಸಬೇಕೇನು ನೀನು ? ಹಾಗಾದರೆ ಅವರಿಂದ ಕೊಲ್ಲಿಸಬೇಡ ; ನೀನೇ ಕೊಂದು ಹಾಕು. ಇದೊ, ಕಠಾರಿ !

ಅರ್ಜುನ : (ಒಳಗೊಳಗೇ ನಗುತ್ತ) ಎಷ್ಟೇ ಹಲ್ಲುಕಿರಿದರೂ ನಿನ್ನನು ನಾನು ಬಿಡುವುದಿಲ್ಲ. ಇಲ್ಲಿ ನೋಡು, ನಾನು ನಪುಂಸಕ : ಸಾವಿಗೆ ಅಂಜುತ್ತೇನೆಯೆ ? ಕಾದಾಡು ; ಜೀವಗಳ್ಳನಾಗಬೇಡ.

ಉತ್ತರ : ನೀವು ವೀರರು, ನಾವು ನಪುಂಸಕರು ; ಸಾಯುವವರಲ್ಲ. ಲೋಕದ ಜೀವಗಳ್ಳರಿಗೆ ನಾನೇ ಗುರು ! ಬೇಗ ಬಿಟ್ಟು ಕಳಿಸು.

ಅರ್ಜುನ : ಕ್ಷತ್ರಿಯನಾದವನು ಯುದ್ಧಮಾಡಲೇ ಬೇಕು. ಯುದ್ಧ ಮಾಡದೆ ಬೆನ್ನು ತಿರುಗಿಸಿದರೆ ಮಹಾಪಾತಕವಾದೀತು. ಯುದ್ಧ ಮಾಡಿದರೆ ಅಶ್ವಮೇಧಯಾಗಮಾಡಿದ ಪುಣ್ಯ ಲಭಿಸುತ್ತದೆ. ಒಂದು ಪಕ್ಷ ಮಡಿದರೆ ನಿನಗೆ ವೀರಸ್ವರ್ಗ ;' ಅತ್ಯಂತ ಅಂದಚಂದದ ಅಪ್ಸರಸ್ತ್ರೀಯರು ಅಲ್ಲಿ ನಿನಗೆ ದಾಸಿಯರು !

ಉತ್ತರ : ಬದುಕಿದ್ದರೆ ಮುಂದೆ ಒಂದು ದಿನ ಅಶ್ವಮೇಧವನ್ನು ಪ್ರತ್ಯಕ್ಷವಾಗಿಯೇ ಮಾಡಬಹುದಲ್ಲ ? ದೇವಲೋಕದ ನಾರಿಯರು ನಮಗೇಕೆ ? ನಮ್ಮ ಅರಮನೆಯ ನಾರಿಯರೇ ಸಾಕು. ಕಾದಾಡದೆ ಹಿಂದಿರುಗಿದರೆ ಮಹಾಪಾತಕ ಎಂದೆಯಾ ? ನಮ್ಮಲ್ಲಿ

ವೈದಿಕ ಬ್ರಾಹ್ಮಣರು ಇಲ್ಲವೇ? ಅವರು ಪಾಪಕ್ಕೆ ತಕ್ಕ ಪ್ರಾಯಃಶ್ಚಿತ್ತ ನೆರವೇರಿಸಿ ಅದನ್ನು ಹೋಗಲಾಡಿಸುತ್ತಾರೆ!

ಅರ್ಜುನ: ಅಲ್ಲಿ ಭಾರಿ ಭಾರಿ ಪ್ರತಿಷ್ಠೆಯ ಮಾತುಗಳನ್ನಾಡಿದೆ: ಇಲ್ಲಿ ಪರಮ ಹೇಡಿಯಂತೆ ಕದ್ದೋಡಬಹುದೆ? ನಾಚಿಕೆ ಆಗುವುದಿಲ್ಲವೆ ನಿನಗೆ?

ಉತ್ತರ: ನಾಚಿಕೆ ಹೇಚಿಕೆ ಎಂಬುದನ್ನು ನನಗೆ ಹೊಂದಿಸಬೇಡ. ನೀನು ನನ್ನ ಮಿತ್ರನೊ ಶತ್ರುವೊ? ನನ್ನ ಅಪ್ಪ ನಿನ್ನನ್ನು ಸಲಹಿದ್ದಾನೆ; ಉಪಕಾರಕ್ಕೆ ಪ್ರತಿಯಾಗಿ ಅಪಕಾರ ಮಾಡಬೇಡ. ನಿನಗೆ ಬೇಕಾದ ಒಡವೆ ವಸ್ತು ಕೊಡುತ್ತೇನೆ; ನನ್ನನ್ನು ಬಿಟ್ಟು ಕಳಿಸು.

ಅರ್ಜುನ: ಹೋಗಲಿ, ಬಿಡು. ನಾನೇ ಯುದ್ಧಮಾಡುತ್ತೇನೆ; ನೀನು ಸಾರಥಿಯಾಗು.

ಉತ್ತರ: ಅಹಾಹಾಹ! ಚೆನ್ನಾಯ್ತು! ಹಿಂದೆ ನೀನು ಯಾವ ರಾಜರ ಎದುರಿಗೆ ಕದನಮಾಡಿದ್ದೆ? ಯುದ್ಧವಿದ್ಯೆ ನಾಟ್ಯವಿದ್ಯೆಯಲ್ಲ ಕಂಡೆಯಾ. ನನ್ನಂಥ ರಾಜಪುತ್ರರಿಗೇ ಅಸಾಧ್ಯವಾದದ್ದು ನಿನ್ನಿಂದ ಆಗಗೊಂಡೀತೆ! ಕೃತ್ರಿಮ ಹೂಡಬೇಡ. ಸುಮ್ಮನೆ ನನ್ನನ್ನು ನನ್ನ ಪಾಡಿಗೇ ಬಿಟ್ಟು ಬಿಡು.

ಆಗ ಅರ್ಜುನ ತಾನು ಯಾರೆಂಬುದನ್ನು ತಿಳಿಸಿ ಉತ್ತರನಿಗೆ ಧೈರ್ಯವನ್ನು ಕೊಟ್ಟು, ಅವನನ್ನು ಸಾರಥಿ ಮಾಡಿಕೊಂಡು ರಣರಂಗಕ್ಕೆ ಪ್ರವೇಶಿಸಿದ.

ಜೊಳ್ಳು ಜಂಭದ ನುಡಿಗಳನ್ನು ಆಡುವವರಿಗೆ ತಾವು ಸತ್ಯ ಸಂಗತಿಯನ್ನು ನಿರೂಪಿಸುತ್ತಿದ್ದೇವೆ ಎಂದೇ ದೃಢನಂಬಿಕೆ. ಅದೆಲ್ಲ ಹುರುಳಿಲ್ಲದ ಬಡಾಯಿ ಎಂಬುದು ಇತರರಿಗೆ ಗೋಚರವಾಗುತ್ತದೆ; ಅವರು ಅಷ್ಟಿಷ್ಟು ನಗುತ್ತಾರೆ. ಹೀಗೆ ಉದ್ದೇಶಪಡದೆ ಹಾಸ್ಯ ಎಬ್ಬಿಸುವವರಲ್ಲಿ ಕೆಲವು ಕನ್ನಡ ಕವಿಗಳೂ ಸೇರಿದ್ದಾರೆ. ಪೊನ್ನ ಎಂಬ ಹೆಸರಿನ ಕವಿ ನಿಜವಾಗಿ ಸಾಧಾರಣ ದರ್ಜೆಯವನು; ಅದು ಹೇಗೋ "ಕವಿ ಚಕ್ರವರ್ತಿ" ಎಂಬ ಪ್ರಶಸ್ತಿ ಅವನಿಗೆ ದಕ್ಕಿತು. ತನ್ನನ್ನು ತಾನೇ ಹೊಗಳಿಕೊಳ್ಳುವುದರಲ್ಲಿ ಅವನು ನಿಸ್ಸೀಮ; ತಾನು ಶ್ರೇಷ್ಠ ಕವಿ ಅಸಗನಿಗಿಂತ ನೂರುಪಾಲು ಹೆಚ್ಚಂತೆ; ತನ್ನ 'ಶಾಂತಿ ಪುರಾಣ' 'ಪುರಾಣಗಳ ಚೂಡಾಮಣಿ' ಯಂತೆ, 'ಹೋಲಿಕೆಗೆ ಮೀರಿದ

ಕೃತಿ'ಯಂತೆ! ಕವಿ ನಾಗವರ್ಮ ಹೀಗೆ ಹೇಳಿಕೊಂಡಿದ್ದಾನೆ: "ನನಗೆ ಇನ್ನಾರು ಸರಿ? ಮಯೂರ ಮಾಘ ಗುಣಾಢ್ಯ ದಂಡಿ ಧನಂಜಯರೆಲ್ಲರೂ ನನಗಿಂತ ಕಡಮೆ; ಕಾಳಿದಾಸನೂ ದಾಸನೆ!" ಅವರೆಲ್ಲ ಸಂಸ್ಕೃತದ ಉದ್ದಾಮ ಕವಿಗಳು. ಅವರನ್ನು ಮೀರಿಸಿದ್ದೇನೆಂದು ನಾಗವರ್ಮ ತಿಳಿದದ್ದು ಬರಿ ಭ್ರಾಂತಿ. ನಾಗಚಂದ್ರ ಒಳ್ಳೆಯ ಕವಿ, ದಿಟ್ಟ; ಆದರೆ ತನ್ನಂತೆ ಬೇರೆ ಕವೀಶ್ವರರಾರಿಗೂ ದೇವಿ ಸರಸ್ವತಿ ವರವನ್ನು ದಯಪಾಲಿಸಲಿಲ್ಲವಂತೆ! ಇಂಥ ಹೆಮ್ಮೆ ಮಾತು ಎಂದಾದರೂ ಸಲ್ಲುತ್ತದೆಯೇ? ಇವರೆಲ್ಲ ಹಾಗಿರಲಿ. ಒಂದನೆಯ ಮಂಗರಸ ಎಂಬ ಲೇಖಕ ಇದ್ದ; ಮಂತ್ರೌಷಧಿಯ ಮೇಲೆ ಒಂದು ಗ್ರಂಥವನ್ನು ಬರೆದ. ಸಪ್ಪೆ ವಾಕ್ಯಗಳ ಆ ಗ್ರಂಥವನ್ನು ಕವಿತೆ ಎನ್ನಲಾಗದು. ಆದರೂ ಮಂಗರಸನಿಗೆ ವಿಪರೀತ ಆತ್ಮಪ್ರಶಂಸೆ. ಅವನು ಹೀಗೆ ಸಾರಿಹೇಳಿದ: "ಮರ ಗಾಳಿ ಧೂಳು ರಾತ್ರಿ ಸೀರಾಟ ಪ್ರೇಮ ಹೆಂಡ ಸೂಳೆ ಅಕಟವಿಕಟ ಮುಂತಾದವುಗಳನ್ನು ಕೊಂಡಾಡುವ ಕವಿಗಳನ್ನು ಸ್ತೋತ್ರಮಾಡಿ ದಣಿಯಲಿಲ್ಲ ಜಗತ್ತು: ಛೀ, ಅವರು ಕವಿಗಳೆ? ಸರ್ವ ಜನೋಪಕಾರದ ಮಂತ್ರೌಷಧೀ ಗ್ರಂಥವನ್ನು ಬರೆದಾತ ದಿಟವಾಗಿ ಮಾನವನಲ್ಲ ದೇವ!" ಅವನ ಹೇಳಿಕೆ ಬರಿ ಗಾಳಿತುಂಬಿದ ರಬ್ಬರು ಬುರುಡೆಯಂತೆ: ಬೆಟ್ಟಿನಿಂದ ಅದುಮಿದರೆ ಸಾಕು ಡಬ್ಬೆಂದು ಒಡೆದುಹೋಗುತ್ತದೆ.

೮

ಕವಿಗಳ ಬುದ್ಧಿ ಚತುರವಾದದ್ದು. ಮಾತುಗಳೊಂದಿಗೆ ಅವರು ಆಗಾಗ ಚಕ್ಕಂದ ಆಡಿ ನಲಿಯುತ್ತಾರೆ. ನಮಗೂ ನಲಿವು ತಂದುಕೊಡುತ್ತಾರೆ. ಒಂದೇ ಶಬ್ದಕ್ಕೆ ಎರಡೊ ಮೂರೊ ಬೇರೆ ಬೇರೆ ಅರ್ಥಗಳುಂಟು ಕನ್ನಡದಲ್ಲಿ. ಆ ಲಕ್ಷಣವನ್ನು ಕನ್ನಡದ ಒಂದು ವಿಶಿಷ್ಟ ಸೊಬಗು ಎಂದು ಒಬ್ಬ ಕವಿ ಹೆಮ್ಮೆಪಟ್ಟಿದ್ದಾನೆ. ಅವನು ಕೊಟ್ಟಿರುವ ಉದಾಹರಣೆಗಳು ಸ್ವಾರಸ್ಯಗೂಡಿವೆ, ಸಂತಸ ಈಯುತ್ತವೆ. ಅವನ ಲಘುಹಾಸ್ಯದಂತೆ ಕನ್ನಡಿಗರು

ಹೀಗೆ ಅದಲುಬದಲು ಪದ ಉಪಯೋಗಿಸುತ್ತಾರೆ : i) "'ಸರಸ' ನನ್ನು 'ಅರಸ' ಎನ್ನುತ್ತಾರೆ" : 'ಅರಸ' ಎಂದರೆ ದೇಶವನ್ನು ಆಳುವ ರಾಜ ; ರಾಜ ಸಾಹಿತ್ಯ ಸಂಗೀತ ಚಿತ್ರಕಲೆ ಎಲ್ಲವನ್ನೂ ಬಲ್ಲ 'ಸ – ರಸ' ಅಥವಾ ರಸಜ್ಞಾನಿ, ರಸಿಕ ; ಅಂಥವನನ್ನು 'ಅ–ರಸ' ಅಥವಾ ರಸಹೀನ, ರಸಿಕತೆ ಇಲ್ಲದವನು ಎನ್ನಬಹುದೆ ? ಕನ್ನಡಿಗರು ಎನ್ನುತ್ತಾರೆ. ii) "ಪೂರ್ಣ ಗೃಹ ವನು ಅರಮನೆ ಎಂಬರ್" : ಅರಸನ ನಿವಾಸ 'ಪೂರ್ಣಗೃಹ' ಎಂದರೆ ಸಂಪೂರ್ಣವಾಗಿ ಕಟ್ಟಿ ಸಿಂಗರಿಸಿದ ವಿಶಾಲ ಭವನ ; ಅದನ್ನು 'ಅರಮನೆ' ಎಂದರೆ ಅರ = ಅರೆ = ಅರ್ಧಮನೆ ಎನ್ನಬಹುದೆ ? ಕನ್ನಡಿಗರು ಎನ್ನುತ್ತಾರೆ; iii) "ನುಡಿಯೆಂಬರು ನಿಂದೆಯನು" : ನಿಂದೆ ಎಂದರೆ ಬಯ್ಗುಳ ಅಥವಾ ದೂಷಣೆ. 'ನುಡಿ' ಪದಕ್ಕೆ ಒಂದರ್ಥ 'ಮಾತಾಡು', ಇನ್ನೊಂದರ್ಥ 'ನಿಂದೆ'. ಆದ್ದರಿಂದ 'ನುಡಿಯೆಂಬರು ನಿಂದೆಯನು' ಎಂಬ ವಾಕ್ಯಕ್ಕೆ 'ನಿಂದೆಗೆ ನುಡಿ ಎಂಬ ಹೆಸರೂ ಇದೆ' ಎಂದು ನಾವು ಅರ್ಥಮಾಡಿಕೊಳ್ಳಬೇಕು, 'ಬಯ್ಗುಳ ಆಡು' ಎಂದಲ್ಲ. iv) "ಪಿಡಿಯೆಂಬರು ಕರಿಣಿಯನು": 'ಕರಿಣಿ' ಎಂದರೆ ಹೆಣ್ಣಾನೆ ; ಹೆಣ್ಣಾನೆಗೆ ಹಳಗನ್ನಡದಲ್ಲಿ 'ಪಿಡಿ' ಎಂಬ ಹೆಸರು. 'ಪಿಡಿ' ಎಂದರೆ 'ಹಿಡಿ' ಎಂದೂ ಅರ್ಥವಿದೆ. ಯಾರಾದರೂ "ಹೋಗು, ಹೆಣ್ಣಾನೆಯನ್ನು ಹಿಡಿದುಕೊಂಡು ಬಾ" ಎಂದು ಅಪ್ಪಣೆ ಮಾಡುತ್ತಾರೆಯೆ ? ನುಡಿ=ನಿಂದೆ ಎಂದಂತೆ ಇಲ್ಲಿಯೂ ಪಿಡಿ=ಹೆಣ್ಣಾನೆ, ಅಷ್ಟೇ ಅರ್ಥ. v) "ತಡೆಯೆಂಬರು ಉರಗಮಂತ್ರವನು" : ಉರಗ=ಹಾವು; ಉರಗಮಂತ್ರ=ಹಾವಿನ ವಿಷವನ್ನು ಇಳಿಸುವ ಮಂತ್ರ. ಆ ಮಂತ್ರಕ್ಕೆ 'ತಡೆ' ಎಂದೂ ಹೆಸರುಂಟು. 'ತಡೆ' ಎಂದರೆ 'ನಿಲ್ಲಿಸು, ಬೇಡ' ಎಂಬ ಅರ್ಥವೂ ಉಂಟು. ಹಾವಿನ ವಿಷಕ್ಕೆ ಮಂತ್ರ "ಹಾಕಬೇಡ, ತಡೆ" ಎಂದು ಯಾರಾದರೂ ಹೇಳಿಯಾರೆ ? ಕನ್ನಡಿಗರು ಹೇಳುತ್ತಾರೆ ! ಇಂಥ ಮಾತುಗಾರಿಕೆಯಿಂದಲೇ ಕನ್ನಡ ವಿಚಿತ್ರ ಜಿಡಗನ್ನು ಪಡೆದಿದೆಯಂತೆ !

ಎರಡರ್ಥದ ಪದಗಳ ಬಳಕೆಯನ್ನು ಒಂದು ಭೂಷಣ ಅಥವಾ 'ಅಲಂಕಾರ' ಎಂದು ಬಗೆದು ಅದಕ್ಕೆ "ಶ್ಲೇಷೆ" ಎಂಬ ಅಂಕಿತವನ್ನು ಕೊಟ್ಟಿದ್ದಾರೆ. ಕುಮಾರವ್ಯಾಸನ ಭಾರತದಲ್ಲಿ ದುರ್ಯೋಧನನೊಡನೆ ಸಂಧಾನಕ್ಕಾಗಿ ಕೃಷ್ಣನನ್ನು ಕಳಿಸುವ ಪ್ರಸಂಗ ಬರುತ್ತದೆ. ಧರ್ಮರಾಯ "ನಮಗೆ ಐದು ಊರುಗಳನ್ನು ಅವನು ಕೊಡಲಿ, ಸಾಕು" ಎನ್ನುತ್ತಾನೆ. ಭೀಮ ಹೇಳುತ್ತಾನೆ : "ಕೃಷ್ಣ, ಕೊಡಿಸು ಐದೂರನಿವರಿಗೆ ; ನಾನು "ಎರಡೂರ



ರಕ್ಕಸಿಯಾದರೇನು ಲಜ್ಜೆಯಿಲ್ಲವೆ ?

ಕೊಂಬೆನು ಕೌರವೇಂದ್ರನಲ್ಲಿ" 'ಊರು' ಎಂಬುದಕ್ಕೆ 'ಗ್ರಾಮ' ಒಂದರ್ಥ; 'ತೊಡೆ' ಎಂಬುದು ಇನ್ನೊಂದರ್ಥ. ಭೀಮನ ಇಂಗಿತ ಇದು : "ಧರ್ಮರಾಯ ಪಾರ್ಥ ನಕುಲ ಸಹದೇವರು ಕೌರವ ಕೊಡುವ ಐದು ಗ್ರಾಮಗಳಿಂದ ತೃಪ್ತರಾಗಲಿ ; ನಾನು ಅವನ ಎರಡು ತೊಡೆಗಳನ್ನೂ ಒಡೆದು ತೃಪ್ತನಾಗುತ್ತೇನೆ." ಪಂಪ ಕವಿ "ತಿನ್ನು" ಎಂಬ ಪದಕ್ಕೆ ಎರಡರ್ಥ ಅನ್ವಯಿಸಿ ಸ್ವಾರಸ್ಯ ಉಂಟುಮಾಡಿದ್ದಾನೆ. ಅರಗಿನ ಮನೆಯಿಂದ ಹೊರಬಿದ್ದ ಪಾಂಡವರು ಕುಂತಿಯೊಂದಿಗೆ ಅರಣ್ಯಕ್ಕೆ ಬಂದು ವೃಕ್ಷದ ಬಡ್ಡೆಯಲ್ಲಿ ನಿದ್ರಿಸುತ್ತಿದ್ದಾರೆ. ಅವರೆಲ್ಲರನ್ನೂ ಎತ್ತಿಕೊಂಡು ಬಂದ ಭೀಮಸೇನ ಮಾತ್ರ ಕಾವಲು ಕಾಯುತ್ತ ಎಚ್ಚೆತ್ತಿದ್ದಾನೆ. ಕಾಡಿನಲ್ಲಿ ವಾಸವಾಗಿದ್ದ ರಾಕ್ಷಸ ಹಿಡಿಂಬ ಮನುಷ್ಯವಾಸನೆ ಹಿಡಿದು, "ಅವರನ್ನು ಇಲ್ಲಿಗೆ ತೆಗೆದುಕೊಂಡು ಬಾ, ನರಮಾಂಸ ತಿಂದು ಬಲು ದಿವಸವಾಗಿದೆ" ಎಂದು ತಂಗಿ ಹಿಡಿಂಬಿಗೆ ಅಪ್ಪಣೆಮಾಡುತ್ತಾನೆ. ಅವಳು ಬಂದು ಭೀಮನನ್ನು ಕಂಡ ಕೂಡಲೆ ಅವನ ಮೇಲೆ ಮೋಹಗೊಳ್ಳುತ್ತಾಳೆ; ಹೀಗೆ ಹೇಳುತ್ತಾಳೆ ಅವನಿಗೆ : "ನಿನ್ನನ್ನು 'ತಿನ್ನು'ವುದಕ್ಕಾಗಿ ನಾನು ಬಂದೆ; ಕಾಮದೇವ ನನ್ನನ್ನು 'ತಿಂದಿ'ದ್ದಾನೆ !"

"ಸುಭಾಷಿತ"ದ ಒಂದು ಪದ್ಯ "ಓದದ 'ಬಾಯಿ', ಅಮೃತಾನ್ನವ ಮೆಲ್ಲದ 'ಬಾಯಿ' ; ಸವಿಮಾತನ್ನು ಆಡದ 'ಬಾಯಿ' ದಿಟವಾಗಿ 'ಬಿಲದ ಬಾಯಿ'!" ಎಂದಿದೆ. ಚೆನ್ನಾಗಿ ಓದದಿದ್ದರೆ, ಒಳ್ಳೆಯ ಊಟ ಉಣ್ಣದಿದ್ದರೆ, ಆದರದ ಮಾತನ್ನು ಆಡದಿದ್ದರೆ, 'ಬಾಯಿ' ಇದ್ದು ಏನು ಪ್ರಯೋಜನ ? ಬಿಲದ ಪೊಟರೆಯೂ ಹಾಗೆಯೇ ಸರಿ.

ಭರತೇಶನ ಹತ್ತಿರಕ್ಕೆ ಅವನ ನಾದಿನಿ ಮಕರಂದಾಜಿ ಬಂದು, "ನಮ್ಮನೆಗೆ ಬಾ ಭಾವಾಜಿ, ಸಾಕೇಳು, ಎಂದು ಕರೆಯುತ್ತಾಳೆ. ಉತ್ತರವಾಗಿ ಅವನು "ನಿನ್ನ ಮನೆಗೆ ನಾನೇತಕ್ಕೆ ಬರಲಿ ? ಸಾಕೇಳು ಎನ್ನುತ್ತೀಯೆ; ನಿನ್ನನ್ನು ಸಾಕುವುದಕ್ಕೂ ಸಲಹುವುದಕ್ಕೂ ನಾನೇನು ನಿನ್ನ ಗಂಡನೆ ?" ಎಂದು ಕುಚೋದ್ಯ ಮಾಡುತ್ತಾನೆ. ಅದೇ ಕಾವ್ಯದಲ್ಲಿ ಭರತೇಶನಿಗೆ ಸುಭದ್ರೆಯೊಡನೆ ವಿವಾಹ ಆಗುತ್ತದೆ; ಆತನ ಇತರ ರಾಣಿಯರು ಮದವಣಗಿತ್ತಿಯನ್ನು ನೋಡುವುದಕ್ಕೆ ಎರಡನೆಯ ಬಾರಿ ಬರುತ್ತಾರೆ. ಬಳೆ ಅರಿಶಿನ ಕುಂಕುಮ ಹೂವು ತಂದಿದ್ದಾರೆ. "ನಿಮಗೆ ನೀನು 'ಹೊಸಬಳೆ'?" ಎಂದು ಪ್ರಶ್ನೆ ಹಾಕಿ, ತಕ್ಷಣ "ನಿನಗೆ ನಾವು 'ಹೊಸ ಬಳೆ' ತಂದಿದ್ದೇವೆ" ಎಂದೂ ಪರಿಹಾಸ ನಡೆಸುತ್ತಾರೆ.

ಶ್ಲೇಷೆ ಒಂದು ಬಗೆಯ ಶಬ್ದ ಚಮತ್ಕಾರ. ಇನ್ನೊಂದು ಬಗೆಯ ಚಮತ್ಕಾರ ಉಂಟು: ಅದರ ಹೆಸರು "ಪ್ರಾಸ". ಅಕ್ಷರಗಳನ್ನು ಮತ್ತೆ ಮತ್ತೆ ಉಪಯೋಗಿಸುವುದೇ ಪ್ರಾಸ. ಸವತಿಯರು ತಿರುಗಿ ಭೇಟಿಕೊಟ್ಟಾಗ ಸುಭದ್ರೆ ಕೇಳುತ್ತಾಳೆ: "ರೋಡಾಡಿ ಹೋದಿರಿ ನಿನ್ನೆ; ಇಂದೇನ ಮಾಡಬಂದಿರಿ? ನೋಡಬಂದಿರೋ ಕಾಡಬಂದಿರೋ?" 'ರೋಡ' 'ಮಾಡ' 'ನೋಡ' 'ಕಾಡ'ಗಳಲ್ಲಿನ 'ಡ' ಕಾರದ ಪುನರುಕ್ತಿ ಪರಿಹಾಸಕ್ಕೆ ಪುಷ್ಟಿಕೊಡುತ್ತದೆ. ಸರ್ವಜ್ಞನ

ಮಾತು ಬಲ್ಲಾತಂಗೆ ಹಿತವದು ಸುರಿದಂತೆ।
ಮಾತಾಡಲರಿಯದಾತಂಗೆ । ಬರಿ ಪಿತ ।
ನೇತಾಡಿದಂತೆ ಸರ್ವಜ್ಞ ॥

ಎಂಬುದರಲ್ಲಿ 'ತ' ಕಾರದ ಪುನರುಕ್ತಿ ತಿರಸ್ಕಾರವನ್ನು ಬಲಗೊಳಿಸುತ್ತದೆ. ಕೀರ್ತನೆಗಳನ್ನು ಕಟ್ಟಿಕೊಟ್ಟಿರುವ 'ದಾಸ' ರೊಬ್ಬರ ವಾಕ್ಯ "ಸೀ ತಂದೆ ನಾ ಬಂದೆ । ನೀಯೆನ್ನ ತಂದೆ॥" ರಮ್ಯವಾಗಿದೆ. ಪ್ರಾಸವನ್ನು ಮಿತವಾಗಿ ಬಳಸಿದರೆ ಹಿತ; ಅತಿಯಾಗಿ ಬಳಸಿದರೆ ಕವಿಗೂ ಮನಸ್ಸಿಗೂ ಬೇಜಾರು. ಕನ್ನಡ ಕವಿಗಳ ಮೇಲೆ ಒಂದು ದೂರು ಇದೆ: "ಶ್ವಾಸಹೋದರೂ ಪ್ರಾಸವನ್ನು ಬಿಡರು". ಹಲವರಲ್ಲಿ ಆ ಆಕ್ಷೇಪಣೆಗೆ ನಿದರ್ಶನ ಸಿಕ್ಕುತ್ತದೆ. ಇವುಗಳನ್ನು ನೋಡಿ. ಹರಿಹರ: "ಮಾಪಿನ ಹೂವಿನ ಕಾವಿನ ತಾವಿನ ಮೊದಲಿಂದೆ ತೀವಿ ದಳಿಗಳಬಳಿಗಂ ಕಿರಣರ್ ಕರುಣರ್ ಶರಣರ್ ಕರುಣಾಳುಗಳ್ ಅರುಣ ಮಣಿನಿಭರ್ ನೆರೆಸಿರ್ದರ್." ಲಕ್ಷ್ಮೀಶ: "ಎಲೌ ಪಾತಕಿಯೆ ಸುತರಳಿವರ್ ಇನ್ನೇನು ಘಾತಕಿಯೆ ಮತ್ಕುಲಕರಿಷ್ಟೆ ನೀನ್ ಅತಿಕಷ್ಟೆ ಪೋಗು ದುಷ್ಟೆ." ಜಗನ್ನಾಥದಾಸ: "ವ್ಯಾಪ್ತಗುಪ್ತ ಜಗದಾಪ್ತ ದೋಷನಿರ್ಲಿಪ್ತ ತೃಪ್ತ ಗತಸುಪ್ತ". ಆದರೂ ಉದ್ದೇಶಪೂರ್ವಕವಾಗಿ ಒಗಟಿನಂಥ ಪ್ರಾಸ ಮಾಲೆಯನ್ನು ಪೋಣಿಸಿದರೆ ಅದು ಅಭಾಸ ಆಗಲಾರದು: ಕನಕದಾಸ ಇದನ್ನು ಬರೆದಿದ್ದಾನೆ:

ಅಂದಕನನುಜನ ಕಂದನ ತಂದೆಯ ಕೊಂದನ
ಶಿರದಲಿ ನಿಂದವನ ।
ಚಂದದಿ ಪಡೆದನ ನಂದನೆಯುಳ ನಲವಿಂದ
ಧರಿಸಿದ ಮುಕುಂದನಿಗೆ ॥

ಈ ಕಾಲದ ಒಬ್ಬ ಕವಿ ೨೦ ಸಾಲಿನ ಒಂದು ಪದ್ಯದಲ್ಲಿ "ಅಟ್ಲೆ ಪಟ್ಲೆ ಕೊಟ್ಲೆ ಸಿಟ್ಲೆ ಜುಟ್ಲೆ ಕಟ್ಲೆ ಮೆಟ್ಲೆ ಬಾಟ್ಲೆ"– ಹೀಗೆ ೨೦ ಕೊನೆಯ ಶಬ್ದಗಳೂ "ಟ್ಲೆ" ಯಿಂದ ಅಂತ್ಯವಾಗುವಂತೆ ಮಾಡಿದ್ದಾನೆ !

ಈ "ಟ್ಲೆ"ಗಳ ರಾಶಿ ಕಿವಿಗೆ ಕೇಳಿಬಂದು ಮನಸ್ಸಿಗೆ ಹೊಕ್ಕು ಹಾಸ್ಯವಾಗುವುದಲ್ಲದೆ ಕಣ್ಣಿಗೆ ಕಂಡುಬಂದರೂ ಹಾಸ್ಯವಾಗುತ್ತದೆ. ಎಂದರೆ, ಅವನ್ನು ಬರೆದು ನೋಡಿ ನಗುತ್ತೇವೆ. ಕಣ್ಣಿನಿಂದ ನೋಡಿದಾಗ ಮಾತ್ರ ನಗುತರುವ ಹಾಸ್ಯಪ್ರಕಾರವೂ ಉಂಟು. ಕನ್ನಡ ಪದಗಳನ್ನು ಹೀಗೆ ಹಾಗೆ ಮುರಿದು ಮೆತ್ತಿ ಎಳೆದು ಗಿಡಿದು ತಯಾರಿಸಿದ ಬರವಣಿಗೆ ಇದೆ. ಕೈಲಾಸಂ ಅದರಲ್ಲಿ ಎತ್ತಿದ ಕೈ. "ನೀರ್ನಲ್ಹಾಕಿ ತಿರಗ್ಮರ್ಳ್ಸಿ (=ನೀರಿನಲ್ಲಿ ಹಾಕಿ ತಿರುಗಿ ಮರಳಿಸಿ) ; ಆ ಕಣ್ಣಿಂಗಿದ್ಕಪೋತದ್ಕಿರ್ಲಾಟಕ್ಕಿವಿಕೊಟ್ಗೊಂಡ್ಮೈಲ ಮೇಲ್ಬೀಳೊ ಮುಂಕ್ಮುಚ್ಚಿದ್ ಗಂಡ್ಸು (=ಆ ಕಣ್ಣಿಂಗಿದ ಕಪೋತದ ಕಿರಲಾಟಕ್ಕೆ ಕಿವಿಕೊಟ್ಟುಕೊಂಡು ಮೈಮೇಲೆ ಬೀಳುವ ಮುಂಕುಮುಚ್ಚಿದ ಈ ಗಂಡಸು) ; ನಾಯಿಗ್ಹಾಕಿದ್ನಿನ್ನ್ಜನ್ಮದುಚ್ಛಿಷ್ಠಾನ್ನರೀಗ್ಹಾಕಾ (ನಾಯಿಗೆ ಹಾಕಿದ ನಿನ್ನ ಜನ್ಮದ ಉಚ್ಛಿಷ್ಠವನ್ನು ನರೀಗೆ ಹಾಕಲಿ) ! ಇತರ ಕೆಲವು ಕವಿಗಳೂ ಅಂಥ ತುಣುಕಗಳನ್ನು ಹೆಣೆದುಕೊಟ್ಟಿದ್ದಾರೆ: "ಯೆಂಡ್ಕುಡ್ಕ (ಹೆಂಡಕುಡುಕ) ; ಏನ್ ಯಿಸ್ನೋನೋ? ಬೆಪ್ನಂಗ್ ಬಿದ್ದೌನೆ ಆಲಿನ ಸೌಂದ್ರದ್ ಮದ್ದ ! (ಏನು ವಿಷ್ಣುವೊ ? ಬೆಪ್ಪನ ಹಾಗೆ ಬಿದ್ದಿದ್ದಾನೆ, ಹಾಲಿನ ಸಮುದ್ರದ ಮಧ್ದ !)". ಇಂಥ ಬರವಣಿಗೆ ಸುಲಭವಲ್ಲ ; ಅದಕ್ಕೂ ಸಾಕಷ್ಟು ಬುದ್ಧಿವಂತಿಕೆ ಬೇಕು.

೬

ಮೃದುವಾಗಿಯೂ ನುಣುಪಾಗಿಯೂ ಇರುವ ಹಾಸ್ಯವೇ ಅತ್ಯುತ್ತಮ ಹಾಸ್ಯ. ಅದಕ್ಕಾಗಿ ಹುಡುಕಬೇಕು. ಹುಡುಕಿ ಕಂಡುಹಿಡಿದು ಚೆನ್ನಾಗಿ ಪರಿಸಿ ಅದರ ಮೇಲ್ಮೆಯನ್ನು ಅನುಭವಿಸಬೇಕು. "ರಾಮಾಶ್ವಮೇಧ" ಎಂಬ ಒಂದು ಗದ್ಯಕಾವ್ಯವಿದೆ. ಅದನ್ನು ಬರೆದ ನಂದಳಿಕೆ ಲಕ್ಷ್ಮೀನಾರಣಪ್ಪ ತನ್ನನ್ನು

"ಮುದ್ದಣ" ಎಂದೂ ತನ್ನ ಹೆಂಡತಿಯನ್ನು "ಮನೋರಮೆ" ಎಂದೂ ಕರೆದುಕೊಂಡಿದ್ದಾನೆ. ಕಾವ್ಯದ ಕಥಾವಸ್ತು "ಉತ್ತರ ರಾಮಾಯಣ" ಅಥವಾ "ಸೀತಾ ಪರಿತ್ಯಾಗ". ಕಥೆಯನ್ನು ಹೇಳುವವ ಮುದ್ದಣ, ಕೇಳುವಾಕೆ ಮನೋರಮೆ. ಮಧ್ಯೆ ಮಧ್ಯೆ ಕಥೆ ನಿಂತು ಗಂಡಹೆಂಡಿರಲ್ಲಿ ಸಂಭಾಷಣೆ ನಡೆಯುತ್ತದೆ ; ಆ ಸಂಭಾಷಣೆಗಳು ಚಿಕ್ಕದಾಗಿವೆ. ಚೆಲುವಾಗಿವೆ. ಅವುಗಳಲ್ಲಿ ಒಂದು ಕವಿಗಳಿಗೆ ಸಾಮಾನ್ಯವಾಗಿ ಅಂಟಿಕೊಂಡಿರುವ ದಟ್ಟ ಬಡತನವನ್ನು ಕುರಿತದ್ದು. ತಾನು ವರಮಾನ ಇಲ್ಲದವ, ಭಿಕ್ಷೆಬೇಡಿಯೇ ತಾವಿಬ್ಬರೂ ಬಾಳನ್ನು ನೂಕಬೇಕು, ಎಂಬ ಸಂಗತಿಯನ್ನು ಬಣ್ಣಕಟ್ಟಿ ನಿಧಾನವಾಗಿ ಮುದ್ದಣ ಮನೋರಮೆಗ ತಿಳಿಯಹೇಳುವುದು ನಾಟಕೀಯವಾಗಿದೆ, ಸೊಗಸಾಗಿದೆ. "ಯಾಗದ ಕುದುರೆಯನ್ನು ಸಂರಕ್ಷಿಸುತ್ತ ಬಂದ ಶತ್ರುಘ್ನನಿಗೂ ಅವನ ಸಾವಿರ ಸೈನಿಕರಿಗೂ ಆರಣ್ಯಕನೆಂಬ ಮುನಿ ಮೃಷ್ಟಾನ್ನದಿಂದ ಸತ್ಕರಿಸಿದ" ಎಂದು ಮುದ್ದಣ ಹೇಳಿದ. ಮನೋರಮೆಗೆ ಅತಿ ಆಶ್ಚರ್ಯ ಉಂಟಾಯ್ತು. ಸಂವಾದ ಪ್ರಾರಂಭವಾಯ್ತು.

ಮನೋರಮೆ : ಕಾಡಿನ ತಪಸ್ವಿ : ಅಷ್ಟೊಂದು ಅತಿಥಿಸತ್ಕಾರ ನಡೆಸಲು ಹೇಗೆ ಸಮರ್ಥನಾದ ?

ಮುದ್ದಣ : ಮುನಿಗಳು ಜಪಿಸುವ ಮಂತ್ರ ಕಿರಿದೆ ? ಬೇಕಾದ್ದೆಲ್ಲವನ್ನೂ ತಂದುಕೊಡುತ್ತದೆ.

ಮನೋರಮೆ : ಹಾಗಾದರೆ. ಅವರಿಗೆ ಮಂತ್ರವಿದ್ದರೆ ಸಾಕು : ಬೇರೆ ಏನೂ ಬೇಡ.

ಮುದ್ದಣ : ಹೌದು, ಹೌದು.

ಮನೋರಮೆ : ನಿನ್ನಂಥ ಕವಿಗಳು ಅದೇತಕ್ಕೆ ಹಾಳುಕವಿತೆ ಬರೆಯುತ್ತ ಭ್ರಾಂತಿ ಪಡುತ್ತಾರೆ ; ಅದರಿಂದ ಅವರಿಗೆ ಉಣ್ಣುವುದಕ್ಕೆ ಉಡುವುದಕ್ಕೆ ಸಾಧ್ಯವಾಗುತ್ತದೆಯೆ ? ಯಾವುದೊ ಒಂದು ಒಳ್ಳೆಯ ಮಂತ್ರವನ್ನು ಉಪದೇಶಿಸಿಕೊಳ್ಳಬಾರದೆ ?

ಮುದ್ದಣ : ಏನು, ನಮ್ಮ ಜೀವನವನ್ನು ಹಂಗಿಸುತ್ತೀಯಾ ? ಇಷ್ಟು



ಪರಿಹಾಸ ಸಾಕಿನ್ನು

ಪಾದ್ದನ್ನು ಕೊಡಬಲ್ಲ ಮಂತ್ರ ಕವಿಗಳಿಗೆ ಕೈವಶವಾಗಿದೆ. ಯಾರ ಉಪದೇಶವೂ ಅವರಿಗೆ ಅಗತ್ಯವಿಲ್ಲ. ನಾಡನ್ನು ಕಾಡಾಗಿಯೂ ಕಾಡನ್ನು ನಾಡಾಗಿಯೂ ಮಾರ್ಪಡಿಸ ಬಲ್ಲ ಶಕ್ತಿ ಅವರಿಗುಂಟು. ಮುದಿ ತಾಪಸರೇಕೆ ಅವರ ಮುಂದೆ ? ಅಷ್ಟೇ ಅಲ್ಲ, ತಮ್ಮ ಒಂದು ಮಾತಿನಿಂದ ಮೂರು ಲೋಕಗಳನ್ನೂ ಅಳಿಸಬಲ್ಲರು. ಉಳಿಸಬಲ್ಲರು. ಆಳಬಲ್ಲರು ; ಅಂಥ ಮಹಾತ್ಮೆ ಇದೆ ಕವಿಗಳಲ್ಲಿ.

ಮನೋರಮೆ : ಅಬ್ಬಬ್ಬ ! ಅಂಥ ದಿವ್ಯ ಮಂತ್ರ ಅವರಿಗೆ ಸಿದ್ಧಿಸಿದೆಯೆ?

ಮುದ್ದಣ : ಓಹೊ, ಅಡ್ಡಿ ಅಡಚಣೆಯಿಲ್ಲದೆ ಸಿದ್ಧಿಸಿದೆ.

ಮನೋರಮೆ : ನಾಥ, ನಿನ್ನಲ್ಲೂ ಅದು ಇದೆಯೋ ?

ಮುದ್ದಣ : ಅದು ನನ್ನ ಬದುಕಿನ ಹಾಸುಹೊಕ್ಕು.

ಮನೋರಮೆ : ಅಹ, ನೀನು ಮಹಿಮೆಯುಳ್ಳವ. ಯಾರಿಂದ ನಿನಗೆ ಮಂತ್ರೋಪದೇಶವಾಯ್ತು.

ಮುದ್ದಣ : ಗುರುವಿನಿಂದ. ನನ್ನ ಎಳೆಯಂದಲ್ಲಿ.

ಮನೋರಮೆ : ಪ್ರಿಯ, ಅದನ್ನು ನನಗೆ ತಿಳಿಸು.

ಮುದ್ದಣ : ಚೆನ್ನಾಯ್ತು. ಮಂತ್ರ ? ನಿನಗೆ? ಛೆ, ಹೆಂಗಸರಿಗೆ ಎಲ್ಲಾದರೂ ಮಂತ್ರೋಪದೇಶ ಆಗಬಹುದೆ ? ಕೂಡದು, ಕೂಡದು.

ಮನೋರಮೆ : ನನಗೆ ಅದು ಗೊತ್ತಿಲ್ಲವೆ ; ನಾನು ನಿನ್ನಿಂದ ಉಪದೇಶ ಬೇಡುತ್ತಿಲ್ಲ. ಮಂತ್ರದ ಹೆಸರನ್ನು ತಿಳಿಸು, ಎಂದೆ.

ಮುದ್ದಣ : ಮುನಿಗಳ ಮಂತ್ರದಂಥಲ್ಲ ನಮ್ಮದು. ಅವರ ಮಂತ್ರಗಳಿಗೆ ಎರಡೊ ಮೂರೊ ಅಕ್ಷರ. ನಮ್ಮ ಮಂತ್ರ ದೊಡ್ಡದು, ನಾಲ್ಕಲ್ಲ ಐದಲ್ಲ ಆರೂ ಅಲ್ಲ, ಏಳು ಅಕ್ಷರಗಳಿಂದ ಕೂಡಿದ ಬೀಜಮಂತ್ರ ಅದು. "ಸಪ್ತಾಕ್ಷರೀ" ಎಂಬುದು ಅದರ ನಾಮಧೇಯ !

ಮನೋರಮೆ : ಅದರ ಅಧಿದೇವತೆ ಯಾರು ? ಹಿಂದೆ ಯಾರು ಯಾರು ಅದನ್ನು ಜಪಿಸಿ ಸಿದ್ಧಿ ಪಡೆದರು ?

ಮುದ್ದಣ : ಹೋಗು, ಹೋಗು. ಅದೆಲ್ಲ ನಿನಗೇತಕ್ಕೆ ?

ಮನೋರಮೆ : ತಿಳಿಯುವುದಕ್ಕೆ ತುಂಬ ಅಪೇಕ್ಷೆ.

ಮುದ್ದಣ : ಹಾಗೊ ; ಹೇಳುತ್ತೇನೆ, ಲಾಲಿಸು. ಮಂತ್ರಕ್ಕೆ ಅಧಿದೇವತೆ "ಜ್ಯೇಷ್ಠೆ". * ಸಾಕ್ಷಾತ್ "ಈಶ್ವರ"ನೇ ಅದಕ್ಕೆ ಋಷಿ ; ಆತನೇ ಅದನ್ನು ಮೊಟ್ಟಮೊದಲು ಜಪಿಸಿ ಸಿದ್ಧಿ ಪಡೆದವ. ಅವನ ಲೀಲೆಗಳಲ್ಲಿ ಅದೇ ಮುಖ್ಯವಾದದ್ದು.

ಮನೋರಮೆ : ಮಹಾಮಂತ್ರವೇ ಸರಿ. ಕಾಂತ, ನಿನ್ನ ಕಾಲಿಗೆ ಬೀಳುತ್ತೇನೆ ; ನನ್ನ ಬಿನ್ನಪ ಸಲ್ಲಿಸು. ದಯವಿಟ್ಟು ಮಂತ್ರವನ್ನು ನನಗೂ ತಿಳಿಸು.

ಮುದ್ದಣ : ಆಗಲೇ ತಿಳಿಸಿದೆನಲ್ಲವೆ ? "ಸಪ್ತಾಕ್ಷರೀ".

ಮನೋರಮೆ : ಅದು ಬರಿ ಹೆಸರು. ಮೂಲ ವಿವರ ಎಲ್ಲವನ್ನೂ ತಿಳಿಯ ಹೇಳು.

ಮುದ್ದಣ : ಎಂಥ ಗಟ್ಟಿಗಿತ್ತಿ ಈ ಹೆಣ್ಣು ! ಆಗ ಹೆಸರೇನು ಎಂದು ಕೇಳಿದಳು ; ಈಗ ಮೂಲ ವಿವರ ತಿಳಿಸು ಎನ್ನುತ್ತಿದ್ದಾಳೆ; ಇನ್ನೂ ಏನೇನಿದೆಯೊ ? ಇಲ್ಲಿ ನೋಡು. ನನ್ನ ಮೂರೆಳೆಯ ಜನಿವಾರದಾಣೆ, ಆಗದು, ಆಗದು, ಹೇಳುವುದಕ್ಕೆ ಅಧಿಕಾರವಿಲ್ಲ. ಹೇಳಿದರೆ ಕಣ್ಣಿಗೂ ಕಾಲಿಗೂ ಕೇಡು.

ಮನೋರಮೆ : ಕಿವಿಯಿಂದ ಕೇಳಿದರೆ ದೋಷವೆ ? ವೇದವನ್ನು ಕೇಳುವುದಿಲ್ಲವೆ ಹೆಣ್ಣುಗಳು ? ಅದೇನು ಜಂಬವೊ ನಿನ್ನದು !

ಮುದ್ದಣ : ವೇದ ಮಂತ್ರದಿಂದ ನಮ್ಮದು ದೂರ ; ಎರಡಕ್ಕೂ ಆನೆಗೂ ಆಡಿಗೂ ಇರುವಷ್ಟು ವ್ಯತ್ಯಾಸ : ಗೂಢಮಂತ್ರ

* ಜ್ಯೇಷ್ಠೆ = ದರಿದ್ರಲಕ್ಷ್ಮಿ ; ಐಶ್ವರ್ಯ ಲಕ್ಷ್ಮಿಯ ಅಕ್ಕ.

ಗಳಲ್ಲಿ ಗೂಢತಮ. ನೀ ಕೇಳಬಾರದು. ನಾ ಹೇಳಬಾರದು. ಕಥೆ ಮುಂದುವರಿಸೋಣ.

ಮನೋರಮೆ : ಕಥೆಯೊ ಗಿಥೆಯೊ! ಬಿಡು, ಬಿಡು ; ಮಂತ್ರವನ್ನು ನಾನು ಕೇಳಲೇಬೇಕು. ಕೊರಳಾಣೆ, ಉಂಗುರದಾಣೆ, ನೀ ಹೇಳದಲ್ಲದೆ ನಾ ಬಿಡೋಳಲ್ಲ. (ಕಾಲಿಗೆ ಬೀಳುತ್ತಾಳೆ)

ಮುದ್ದಣ : ಎಂಥ ಚಪಲೆ, ಎಷ್ಟು ಛಲಗಾತಿ ಈಕೆ ! ಹೇಳಬಾರದೆಂದರೆ ನನ್ನ ಮಾತನ್ನು ಕೇಳಬಾರದೆ ? ಹೇಳಿ ನಮ್ಮ ಬೀಜಮಂತ್ರವನ್ನು ಹೇಗೆ ಹೊಲೆಗೆಡಿಸಲಿ ? ಛಿ, ಪಾಪಿಯು ಹೆಂಡಿರ ಕೈಯಿಗೆ ಸಿಕ್ಕಿರುವ ಕಪಿಯ ಬದುಕು ಪಾಡಲ್ಲ ! (ಆಲೋಚಿಸಿ) ಎಲೆ ಹೆಣ್ಣೆ, ನೀನು ಮತ್ತಾರಿಗೂ ಎಂದೂ ಅದನ್ನು ಪಿಸುಗುಟ್ಟಬಾರದು ; ಜೋಕೆ.

ಮನೋರಮೆ : ಎಂದಾಗಲಿ ಎಂತಾಗಲಿ ನಾನು ಇತರರಿಗೆ ತಿಳಿಸುವುದಿಲ್ಲ.

ಮುದ್ದಣ : ಹಾಗಾದರೆ, ಇದು ; ಲಾಲಿಸು, “ಭ...ವ...” ಯಾರಿಗೂ ಹೇಳುವುದಿಲ್ಲ ಎಂದು ಭಾಷೆ ಕೊಡು.

ಮನೋರಮೆ : ಇದೊ, ನಂಬಿಕೆಯ ಹಸ್ತ. ನಿನ್ನಾಣೆ. ಕುಲದೇವರಾಣೆ. ಎಂದೂ ಅನ್ಯರಿಗೆ ಹೇಳುವುದಿಲ್ಲ.

ಮುದ್ದಣ : ಹೂಂ. “ಭವತಿ......ಭಿ......” ಹೆಂಗಸರನ್ನು ನಂಬಬಾರದು ಎಂದು ಜ್ಞಾನಿಗಳು ಬೋಧಿಸಿದ್ದಾರೆ. ನೀನೇನಾದರೂ ಮರೆತು ಪರರಿಗೆ ಹೇಳಿಬಿಟ್ಟರೆ ನಮ್ಮ ಬಾಳು ಹಾಳು !

ಮನೋರಮೆ : ನಾನೇನು ದಡ್ಡಳೆ ? ನನ್ನಾಣೆ. ನನ್ನ ಕಣ್ಣಾಣೆ. ಯಾರಿಗೂ ತಿಳಿಸುವುದಿಲ್ಲ.

ಮುದ್ದಣ : (ಗುಟ್ಟಾಗಿ) “ಭವತಿ ಭಿಕ್ಷಾಂದೇಹಿ”. ಇದೇ ಕಪಿಗಳ ಸಿದ್ಧ ಮಂತ್ರ, ಗುಟ್ಟಾಗಿಟ್ಟುಕೊ.

ಮನೋರಮೆ : (ಅರ್ಥ ಗ್ರಹಿಸಿ, ಅರ್ಧ ಕೋಪದಿಂದ) ಸಾಕು, ನಿಲ್ಲಿಸು.

ನಿನ್ನ ಮಾತು ಸಹಜ. ನೀ ಸತ್ಯವಂತ, ಎಂದು ನಂಬಿದೆ. ಈ ಬಗೆಯ ಮೋಸಗಾರ ಕುತಂತ್ರ ಎಂದು ನಾನು ಭಾವಿಸಲಿಲ್ಲ. ನೀನು ಕವಿಯೊ ಹಾಸ್ಯಗಾರನೊ ? ನಿನ್ನ ಕವಿತೆಯನ್ನು ನಮ್ಮಂಥ ತಿಳಿಗೇಡಿಗಳು ಕೊಂಡಾಡುತ್ತಾರೆಯೇ ಹೊರತು ಬುದ್ಧಿವಂತರು ಯಾರು ಮೆಚ್ಚುತ್ತಾರೆ ?

ಮುದ್ದಣ : ಪರಿಹಾಸ ಸಾಕು. ಮುಂದಣ ಕಥೆ ಕೇಳು.

ಕೆಂಪುನಾರಾಯಣನೆಂಬ ಕವಿ ಒಂದು ರಸವತ್ತಾದ ಕಾದಂಬರಿಯನ್ನು ಬರೆದಿದ್ದಾನೆ. ಅದರ ಹೆಸರು "ಮುದ್ರಾ ಮಂಜೂಷ". ಅದರ ಕಥಾವಸ್ತು ಪ್ರಚಂಡ ಬುದ್ಧಿ ಶಕ್ತಿಯ ಚಾಣಕ್ಯನೆಂಬ ಬ್ರಾಹ್ಮಣ ರಾಜ್ಯವನ್ನು ಅನ್ಯಾಯದಿಂದ ಆಕ್ರಮಿಸಿಕೊಂಡಿದ್ದ ನವನಂದರನ್ನು ಯುಕ್ತಿಯಿಂದ ನಾಶಮಾಡಿ ಚಂದ್ರಗುಪ್ತನನ್ನು ಸಿಂಹಾಸನದಲ್ಲಿ ಸ್ಥಿರವಾಗಿ ಕೂರಿಸುವುದು. ಒಮ್ಮೆ ಪರ್ವತರಾಜ ಭಾರಿ ದಂಡಿನೊಡನೆ ಚಂದ್ರಗುಪ್ತನಿಗೆ ಬೆಂಬಲ ಕೊಡಲು ಪಾಟಲಿಪುರಕ್ಕೆ ಬಂದ. ಚಾಣಕ್ಯ ಆತನಿಗೆ ಆಹ್ವಾನ ಕಳಿಸಿದ್ದ. ಅದು ರಹಸ್ಯ ವ್ಯವಹಾರ. ಪಟ್ಟಣದ ಪ್ರಜೆಗಳಿಗೆ ನಿಜಾಂಶ ಅರಿವಾಗಿರಲಿಲ್ಲ. ಪರಿಣಾಮವಾಗಿ ಅವರೆಲ್ಲ ತಮ್ಮ ತಮ್ಮ ಮನಸ್ಸಿಗೆ ತೋಚಿದಂತೆ ಊಹೆಗಳನ್ನು ಕಟ್ಟಿ ಗುಜುಗುಜುಗುಟ್ಟಿದರು. ಆ ಪರಿಸ್ಥಿತಿಯನ್ನು ಕವಿ ವಾಸ್ತವಿಕವೋ ಎಂಬಂತೆ ಆಸಕ್ತಿಯಿಂದ ವರ್ಣಿಸಿದ್ದಾನೆ. ನಾನಾ ವರ್ಗಗಳಲ್ಲಿ ಏನೇನು ಆತಂಕ ಇದ್ದಿತೆಂಬುದೂ ಏನೇನು ಚರ್ಚೆ ಆಗುತ್ತಿತ್ತೆಂಬುದೂ ಕಣ್ಣಿಗೆ ಕಟ್ಟಿದಂತೆ ಬಂದಿವೆ.

ವೈದಿಕ ಪಂಗಡದವರಿಗೆ ಹೀಗೆ ತೋರಿಬಂತು : "ಪರ್ವತರಾಜ ಬಲು ಉದಾರಿಯಂತೆ. ಆತ ಬರುತ್ತಿರುವುದು ಕಾಶೀಯಾತ್ರೆಗಾಗಿ. ಬನ್ನಿ, ಅವನ ಬಳಿಗೆ ಹೋಗೋಣ. ನಮಗೆ ಭೇಷಾದ ಭೋಜನವೂ ಧಾರಾಳ ದಕ್ಷಿಣೆಯೂ ದೊರೆಯುತ್ತವೆ."

ವರ್ತಕರ ಕಳವಳ ವಿಧವಿಧವಾಗಿತ್ತು. ಒಬ್ಬ ಗೊಣಗುಟ್ಟಿದ : "ನನ್ನಲ್ಲಿ ಸರಕು ಗಡದ್ದಾಗಿ ತುಂಬಿಕೊಂಡಿದೆ. ಮಾರುವುದು ಹೇಗೆ ? ಬೇರೆ ನಗರಗಳಿಗೆ ರವಾನಿಸುವುದಕ್ಕೆ ಆಸ್ಪದವಿಲ್ಲ. ಹೆಗ್ಗಣದ ಕಾಟವೊ ವಿಪರೀತ. ಈ ಹಾಳು

ಚಾಣಕ್ಯ ನಮ್ಮ ಭಾಗಕ್ಕೆ ಶನೀಶ್ವರ !" ಇನ್ನೊಬ್ಬ ಹೇಳಿದ : "ಅದಕ್ಕೇನು ? ನೀನೂ ಚೆನ್ನಾಗಿ ಉಣ್ಣು ; ಬಡವರಿಗೆ ದಾನಮಾಡು : ಪುಣ್ಯಕಟ್ಟಿಕೊಳ್ಳುತ್ತೀಯೆ !" ಮತ್ತೊಬ್ಬ ಅವನನ್ನು ಗದರಿಸಿದ : "ಒಳ್ಳೆಯ ಮಿತ್ರನಪ್ಪ ನೀನು ! ಆ ಸೆಟ್ಟಿಗೆ ಇದ್ದಬದ್ದದ್ದನ್ನೆಲ್ಲ ಕೊಟ್ಟುಬಿಟ್ಟು ಬಾಯಿಗೆ ಮಣ್ಣು ಹಾಕಿಕೊ ಎಂದು ಸಲಹೆ ಕೊಡುತ್ತೀಯೆ ! ಅದಕ್ಕೇ ನಿನಗೆ ಹರುಕು ಅಂಗಿ ಜೂಲು ರುಮಾಲು." ನಾಲ್ಕನೆಯವ ಉತ್ಸಾಹದಿಂದ ಹೇಳಿದ : "ಬಂದಿರುವವರು ಎಂತಿದ್ದರೂ ಊರನ್ನು ಸೂರೆಮಾಡುತ್ತಾರೆ. ನಾನೂ ಅವರ ಜೊತೆ ಸೇರಿಕೊಂಡು ಕೈಯಿಗೆ ಸಿಕ್ಕಿದಷ್ಟನ್ನು ದೋಚಿಕೊಳ್ಳುತ್ತೇನೆ. ನನ್ನ ಬಡತನ ಇಂಗಿಸುವುದಕ್ಕೆ ದೇವರೇ ಈ ಅವಕಾಶ ಕಲ್ಪಿಸಿದ್ದಾನೆ !" ಮತ್ತೊಬ್ಬ ಅವನನ್ನು ಛೀಮಾರಿ ಮಾಡಿದ : "ಏನೊ, ಜ್ಞಾನವಿಲ್ಲವೇನೊ ನಿನಗೆ ? ಹೀಗೆ ಹುಚ್ಚುಹುಚ್ಚಾಗಿ ಮಾತಾಡುತ್ತೀಯೆ. ಸರಕಾರದವರಿಗೆ ನಿನ್ನ ಮಾತು ಕೇಳಿಸಿದರೆ ನಿನಗೆ ಶಿಕ್ಷೆ ಖಂಡಿತ. ನಿನ್ನ ಜೊತೆಯಲ್ಲಿರುವ ನಮಗೂ ಅಪಾಯ !" ಒಬ್ಬ ಪ್ರೌಢ ಶೆಟ್ಟಿ ಸಮಾಧಾನಮಾಡಲು ಪ್ರಯತ್ನಿಸಿದ : "ಇದೇತಕ್ಕೊ ನಿಮಗೆಲ್ಲ ಭೀತಿ ? ನಮ್ಮಲ್ಲಿಗೆ ಬಂದಿರುವವ ಮೇಲೆ ನುಗ್ಗುವ ಶತ್ರುವಲ್ಲ. ದೊರೆಯು ಮೊಮ್ಮಗ ಚಂದ್ರಗುಪ್ತ."

ಹೆಂಗಸರ ದಿಗಿಲೂ ಚಿಂತೆಯೂ ಅಷ್ಟಿಷ್ಟಲ್ಲ. ಒಬ್ಬಳ ಗೋಳಾಟ ಇದು : "ನಮಗೇನು ಗತಿ ಈಗ ? ಪರ್ವತರಾಜ ಮಹಾದುಷ್ಟ. ಕಿರಾತರೂ ಬರ್ಬರರೂ ಹೂಣರೂ ಅವನ ಸಂಗಾತಿಗಳು. ಅವರು ಮಕ್ಕಳನ್ನು ಕಚ್ಚಿ ತಿನ್ನುತ್ತಾರಂತೆ ; ಹೆಂಗಸರನ್ನು ಹಿಡಿದು ಪೀಡಿಸಿ ಕೆಡಿಸುತ್ತಾರಂತೆ. ನನ್ನ ಗಂಡ ಮುದುಕ ; ಶುಶ್ರೂಷೆ ಸಲ್ಲದಿದ್ದರೆ ಸತ್ತುಹೋಗುತ್ತಾನೆ. ಎಲ್ಲಿ ಹೋಗಲಿ ?" ಇನ್ನೊಬ್ಬಳ ಕೊರಗು : "ನಾನು ಬಹಳ ಸುಂದರಿ. ಏನಾಗಿ ಬಿಡುತ್ತದೋ ಎಂದು ನನ್ನ ಪತಿ ದುಃಖದಲ್ಲಿ ಮುಳುಗಿದ್ದಾನೆ !" ಮೂರನೆಯವಳ ಸಂತಾಪ : "ನನ್ನ ಮುದ್ದುಮಗುವಿಗೆ ಏಳೇ ತಿಂಗಳು ; ಅದರ ಮುಖ ಪೂರ್ಣಚಂದ್ರನ ಮುಖ ! ನಾನೂ ನನ್ನ ಗಂಡ ಇಬ್ಬರೇ ಪಾಲಕರು. ಏನು ಅವಸ್ಥೆ ಆಗಬೇಕೊ." ಆಗ ಇನ್ನೊಬ್ಬಳು ಗಂಭೀರವಾಗಿ ಬೋಧಿಸಿದಳು : "ನಾವೆಲ್ಲ ಗಂಗೆಗೆ ಬಿದ್ದು ಸತ್ತು ಸದ್ಗತಿ ಸೇರೋಣ !" ಅದನ್ನು ಪ್ರತಿಭಟಿಸಿ ಬೇರೊಬ್ಬಳು ಸಮಾಧಾನ ಹೇಳಿದಳು : "ಅಂಥ ಯೋಚನೆ ಏತಕ್ಕೆ ? ದೇವರು ಮಾಡಿಸಿದ್ದಂತೆ ಆಗುತ್ತದೆ :" ಮಗುದೊಬ್ಬಳ ಧೈರ್ಯದ ಹೇಳಿಕೆ : "ಚಾಣಕ್ಯ ಬ್ರಾಹ್ಮಣ : ಅವನಿಂದ ಏನೂ ಕೆಡುಕು ಆಗಲಾರದು !"

ಅವಳನ್ನು ಅಣಕಿಸುತ್ತ ಇನ್ನೊಬ್ಬಳು ನುಡಿದಳು: "ಬ್ರಾಹ್ಮಣನಂತೆ ಬ್ರಾಹ್ಮಣ! ಕ್ಷತ್ರಿಯರನ್ನು ಕೂಡಿಕೊಂಡು ಭ್ರಷ್ಟನಾಗಿದ್ದಾನೆ. ಅವನಿಗೆ ಕರುಣೆ ಉಂಟೆ?" ಮತ್ತೊಬ್ಬಳು ಪ್ರಶ್ನೆ ಎತ್ತಿದಳು: "ನಂದರು ಅದೇತಕ್ಕೆ ಅಂಥ ಕಗ್ಗೊಲೆ ಮಾಡಬೇಕಾಗಿತ್ತು?" ಇನ್ನೊಬ್ಬಳು ಗೆಲುವಿನ ಮಾತು ಹೇಳಿದಳು: "ಚಂದ್ರಗುಪ್ತ ದೊರೆಯಾಗುತ್ತಾನೆ. ನಮಗೆ ಭಯವೇ ಇಲ್ಲ."

ಕ್ಷತ್ರಿಯ ಸ್ತ್ರೀಯರು ಹರ್ಷದಿಂದ ಹೇಳಿಕೊಳ್ಳುತ್ತಿದ್ದರಂತೆ ಹೀಗೆ: "ಕಾಳಗ ಆಯ್ತುಂತೆ. ನಮ್ಮವರು ವೈರಿಗಳನ್ನು ಸೋಲಿಸಿ ಸದೆಬಡಿದು, ಅವರ ಹೆಂಡಿರನ್ನು ಸೆರೆಹಿಡಿದು ಸುಂದರದುರ್ಗಕ್ಕೆ ಕಳಿಸಿದ್ದಾರಂತೆ!"

೧೦

ಒಂದು ಬಗೆಯ ಮಿಶ್ರಹಾಸ್ಯವನ್ನು ಈಗ ತೆಗೆದುಕೊಳ್ಳೋಣ. ಅದು ಹೊರತೋರಿಕೆಯಲ್ಲಿ ಕಟು ಅಥವಾ ಬಿರುಸು. ಅಷ್ಟೇ ಅಲ್ಲ; ಗೇಲಿ ಅಥವಾ ಲೇವಡಿಯ ಹಾಗೆಯೂ ಅದು ಕಾಣಬರುತ್ತದೆ. ಸತ್ಯಾಂಶವೊ ನಿಜವಾದ ಉದ್ದೇಶವೊ ಗೊತ್ತಾದ ಮೇಲೆ ಅದು ಹಿತವಾದ ಪ್ರಭಾವವನ್ನೇ ನಮ್ಮ ಮೇಲೆ ಬೀರುತ್ತದೆ. ಅರ್ಜುನ ವಿಪ್ರವೇಷದಲ್ಲಿ ಮತ್ಸ್ಯಯಂತ್ರವನ್ನು ಹೊಡೆದು ದ್ರೌಪದಿಯನ್ನು ಗೆದ್ದುಕೊಳ್ಳುವ ಪ್ರಸಂಗದಲ್ಲಿ ಒಂದು ಹಗರಣ ನಡೆಯುತ್ತದೆ. ಕುಮಾರವ್ಯಾಸ ಅದನ್ನು ಚಾಕಚಕ್ಯವಾಗಿ ಕಥನಿಸಿದ್ದಾನೆ. ಧನುಸ್ಸನ್ನು ಎತ್ತುವುದಕ್ಕೆ ಸಭೆಯಲ್ಲಿದ್ದ ಭೂಪಾಲರಾರಿಗೂ ಶಕ್ಯವಾಗಲಿಲ್ಲ. "ವಿಪ್ರರಾದರೂ ಇಷ್ಟವಿದ್ದರೆ ಮುಂದೆ ಬನ್ನಿ!" ಎಂದು ಘೋಷಿಸಿದರು. ಧರ್ಮರಾಯನ ಕಣ್ಸೂಚನೆಯನ್ನು ಅರ್ಜುನ ಗಮನಿಸಿದ. ಎದ್ದು ನಿಂತ. ಗಂಭೀರವಾಗಿ ಹೆಜ್ಜೆ ಹಾಕುತ್ತ ಬಿಲ್ಲಿನ ಬಳಿಗೆ ನಡೆದ. ಅವನ ಹೊಸ ಜನಿವಾರ, ಹಣೆಗೆ ಬಳಿದ ವಿಭೂತಿ, ನೆಲದಮೇಲೆ ಎಳೆದಾಡುವಂತೆ ಕಚ್ಚೆಕಟ್ಟಿದ ಧೋತ್ರ, ಕೈಯಿನ ಕುಶೆ ದರ್ಭೆ ಇತ್ಯಾದಿಯನ್ನು ನೋಡುತ್ತ ವಟುಗಳು ಅಪಹಾಸ್ಯ ಮಾಡಿದರು: "ಏನು ಉಪಾಧ್ಯರೆ, ಎದ್ದುಬಂದಿರಿ? ನಿಮ್ಮ ಹೆಬ್ಬಯಕೆ



ಉಪಾಧ್ಯನಾದರೇನು ?

ಯಾವುದು ? ಬಿಲ್ಲನ್ನು ಬಗ್ಗಿಸಿ ಬಾಣ ಹೂಡಬೇಕೆ ? ರಾಜಪುತ್ರಿಯ ಮೇಲೆ ಮನಸ್ಸಾಯಿತ್ತೆ ? ಇದೇನಿದು ನಿಮ್ಮ ಅಪೂರ್ವ ಉತ್ಸಾಹ ?" ವಯಸ್ಸಾದ ವಿಪ್ರರು ಬಗೆಬಗೆಯ ವಾಕ್ಯಗಳನ್ನು ಆಡಿದರು. ಕೆಲವರು "ಛಿ, ಇದೇನು ಕಾರ್ಯ" ಎಂದು ಜರಿದರು ; ಇನ್ನು ಕೆಲವರು ಓಹೊ ಇದೆಲ್ಲ ನನಗೆ ಗೊತ್ತು, ಎಂದರು ; ಮತ್ತೆ ಕೆಲವರು ವಿಪ್ರಕುಲಕ್ಕೇ ಇದು ಕಳಂಕ ಎಂದು ಸಾರಿದರು ; ಕೆಲವರು ಇದೇನೂ ತಪ್ಪಲ್ಲ ಎಂದರು ; ಕೆಲವರು ಈತನದು ಒಳ್ಳೆಯ ಆಕಾರ, ಮುಖದಲ್ಲಿ ಭಾಗ್ಯ ಹೊಳೆಯುತ್ತಿದೆ, ಎಂದರು. ದ್ರೌಪದಿಯನ್ನು ಸುತ್ತುವರಿದಿದ್ದ ಸಖಿಯರಿಗೆ ನಗುವೊ ನಗು. ಅವರು ನಯ ವಿನಯ ಭಾವಿಸದೆ ನೇರವಾಗಿ ಗೇಲಿಮಾಡಿದರು : "ಈ ದನುಸ್ಸು ಈತನಿಗೆ ಕೃಷ್ಣಾಜಿನದಂತೆ ಕಂಡಿತೋ ? ಸಮಿತ್ತುಗಳ ಕಟ್ಟಿನಂತೆ ಕಂಡಿತೊ ? ಹೋಮದ ಸಾಮಾನಾಗಿ ಕಂಡಿತೊ ? ಒಣ ವಿಪ್ರನ ಮಹದಾಸೆಯನ್ನು ಭಾವಿಸಿ : ನಮ್ಮ ದ್ರೌಪದಿಯ ಭಾಗ್ಯವೇ ಭಾಗ್ಯ ಇಂಥವನನ್ನು ಪಡೆಯುವು ದಕ್ಕೆ ! ಇತ್ತ ನೋಡು, ದ್ರೌಪದಿ, ಈ ಹಾರುವರು ಧನುಸ್ಸನ್ನು ಎತ್ತು ತ್ತಾರೆ, ಯಂತ್ರವನ್ನು ಹೊಡೆದು ಬೀಳಿಸುತ್ತಾರೆ ! ಹೊತ್ತು ಕಳೆಯುವುದಕ್ಕೆ ಇದೊಂದು ಒಳ್ಳೆಯ ಪ್ರಹಸನ !" ಅವರ ಲೇವಡಿಯನ್ನು ಆಲಿಸುತ್ತ ದ್ರೌಪದಿ ಲಜ್ಜೆಪಟ್ಟು ತಲೆತಗ್ಗಿಸಿ ಉಂಗುಷ್ಟದಿಂದ ನೆಲವನ್ನು ಕೆರೆದಳಂತೆ. ಹೀಗೆ ಹಲವರಿಂದ ಹಲವು ತರಹೆಯ ಟೀಕೆಗೆ ಗುರಿಯಾದ ವ್ಯಕ್ತಿ ಅಶಕ್ತ ಬ್ರಾಹ್ಮಣನಲ್ಲ, ಸಾಹಸವೀರ ಪಾರ್ಥ. ಅವನು ಗೆದ್ದಕೂಡಲೆ "ಆಯೆನುತ ಬೊಬ್ಬಿರಿದು ವಿಪ್ರನಿಕಾಯ ಕುಣಿದುದು."

ಹರಿಹರನ ಕಾವ್ಯವೊಂದರಲ್ಲಿ ಪಾರ್ವತಿ ಈಶ್ವರನನ್ನು ಒಲಿಸಿಕೊಳ್ಳುವುದ ಕ್ಕೋಸ್ಕರ ತಪಸ್ಸುಮಾಡುತ್ತಾಳೆ. ಅವಳ ಮನಸ್ಸನ್ನು ಪರೀಕ್ಷಿಸಲು ಈಶ್ವರ ವಟುವೇಷದಲ್ಲಿ ಬಂದು ಅವಳ ಮುಂದೆ ನಿಂತುಕೊಂಡು ಹೇಳುತ್ತಾನೆ ; "ನಿನಗೂ ಅವನಿಗೂ ಹೊಂದಾಣಿಕೆ ಹೇಗಾದೀತು ? ನೀನು ಮಧುರ ಆತ ವಿಷ ; ನೀನು ಅತಿಮೃದು ಆತನಲ್ಲಿ ಕಠಿಣ ಗುಣಗಳು ಕೂಡಿಕೊಂಡಿವೆ ; ನೀನು ಅಬಲೆ ಆತ ಉಗ್ರ ; ನೀನು ಬಲು ಅಂಜುವವಳು ಆತ ಸರ್ಪವನ್ನು ಕೊರಳಹಾರ ಮಾಡಿಕೊಂಡವನು !" ಆ ಮಾತಾವುದೂ ಅವಳ ದೃಢಚಿತ್ತ ವನ್ನು ಕದಲಿಸುವುದಿಲ್ಲ. ಈಶ್ವರ ಪಾರ್ವತಿಯನ್ನು ಮದುವೆಮಾಡಿಕೊಳ್ಳು ತ್ತಾನೆ.

“ಪಂಪಭಾರತ”ದಲ್ಲಿ ಅರ್ಜುನ ತಪಸ್ಸುಮಾಡುತ್ತಿರುತ್ತಾನೆ. ಬಿಲ್ಲು ಬತ್ತಳಿಕೆ ಖಡ್ಗ ಕವಚ ಧರಿಸಿಯೇ ಅವನ ತಪಸ್ಸು. ಅವನ ಧ್ಯಾನವನ್ನು ಕೆಡಿಸಲು ಬಂದ ದೇವಕನ್ಯೆಯರು ಹೀಗೆ ಗೇಲಿಮಾಡುತ್ತಾರೆ: “[illegible] ಜಟೆ ತಪಸ್ಸಿಗೆ ಸರಿಯಾದವು ; ಬತ್ತಳಿಕೆ ಬಿಲ್ಲು ಕವಚ ಹೇಗೆ ಹೊಂದುತ್ತವೆಯೋ ? ಮುತ್ತನ್ನೂ ಮೆಣಸನ್ನೂ ಪೋಣಿಸಿದ ಹಾಗಿದೆ ನಿನ್ನ ತಪಸ್ಸಿನ ರೀತಿ !”

ಶಿವ ಪಾರ್ವತಿಯ ಪ್ರಸಂಗ ಅನೇಕ ಕವಿಗಳಿಗೆ ಅಪೇಕ್ಷಿತ ವಸ್ತುವಾಗಿದೆ. ಪಂಡಿತಕವಿಗಳು ಹಾಗಿರಲಿ, ಜನತೆಯ ಕವಿಗಳೂ ಅದನ್ನು ಬಹುರಸಿಕತೆಯಿಂದ ಬಳಸಿಕೊಂಡಿದ್ದಾರೆ. ಅವರ ಕಾವ್ಯಗಳಲ್ಲಿ ಶಿವ ಬಡಜೋಗಿಯ ವೇಷ ತಾಳಿ ಧ್ಯಾನದಲ್ಲಿರುವ ಪಾರ್ವತಿಯನ್ನು ಕಂಡು ಹೀಗೆ ಮಾತು ಪ್ರಾರಂಭಿಸುತ್ತಾನೆ : “ನಾರಿ, ನೀನಾರು ? ಕಲ್ಲಿಗೆ ಊರಿದ ಹತ್ತಾರು ಸೂಜಿಗಳ ಮೇಲೆ ಕುಳಿತು ಏತಕ್ಕಾಗಿ ತಪಸ್ಸುಮಾಡುತ್ತಿರುವೆ ? ನಿನ್ನ ಮೋರೆ ಮೇಲೆ [illegible] ಉರಿಬೆಂಕಿ ! ಬಹಳ ಚೆಲುವುಗಾತಿ ನೀನು : ನಿನಗೋಸ್ಕರ ಬೇರೆಯವರು ತಪಸ್ಸು ಮಾಡಬೇಕು !” ತರುವಾಯ ಜ್ಞಾಪಕಗೊಂಡವನಂತೆ ನಟಿಸಿ ಮುಂದು ವರಿಸುತ್ತಾನೆ : “ಓಹೋ, ಯಾವಳೋ ಸುಂದರ ಯುವತಿ ಶಿವನಿಗಾಗಿ ತಪಸ್ಸು ಮಾಡುತ್ತಿದ್ದಾಳೆಂದು ಕೇಳಿದ್ದೆ : ನೀನೇ ಅವಳೇನು ! ಅಯ್ಯೋ ಹುಚ್ಚಿ ! ಅವನ ವಿಚಾರ ನಿನಗೆ ಗೊತ್ತಿಲ್ಲ. ಅವನು ಬೂದಿಬಡುಕನಂತೆ ; ಅವನ ಬಗಲಲ್ಲಿ ತಿರುಕನ ಜೋಳಿಗೆ ; ಹಾವುಗಳೇ ಅವನ ಒಡವೆಗಳಂತೆ : ಅವನು ಮಲಗುವುದು ಸ್ಮಶಾನದಲ್ಲಂತೆ : ತೊಗಲನ್ನು ಹೊದ್ದುಕೊಳ್ಳುತ್ತಾನಂತೆ : ಅವನ ಕೊರಳಲ್ಲಿ ಘೋರ ವಿಷವಂತೆ ! ಎಲೆ ಹುಡುಗಿ, ಬಡಜೋಗಿ ಶಿವನ ಹುಚ್ಚು ನಿನಗೇಕೆ ? ಮುಳ್ಳು ಮುತ್ತುಗದ ಮರಕ್ಕೂ ಮಲ್ಲಿಗೆ ಬಳ್ಳಿಗೂ ಯಾವೂರ ನಂಟು! ನಂಟಿಲ್ಲ. ಹುಡುಗಿ: ಶಿವನ ಹುಚ್ಚನ್ನು ಬಿಟ್ಟುಬಿಡು.” ಪಾರ್ವತಿ ಕಣ್ಣುಮುಚ್ಚಿ ಶಿವನ ಧ್ಯಾನದಲ್ಲೇ ಇದ್ದಾಳೆ. ಅದನ್ನು ಕಂಡು ಶಿವನಿಗೆ ಆನಂದ. ನಂಟಿಕೆಯ ಮಾತನ್ನು ಆಡುತ್ತಾನೆ : “ಶಿವನಂಥ ಗಂಡ ನಿನಗೆ ಬೇಕಾದರೆ ಜಾಣೆ, ಹುಡುಗಿ, ನಮ್ಮ ಕೂಡ. ಶಿವ ಒಲಿಯುವುದೂ ಒಂದೆ, ನಾವು ಒಲಿಯುವುದೂ ಒಂದೆ ! ತಪಸ್ಸನ್ನು ಬಿಡು, ಬಾ ನಮ್ಮೊಡನೆ.” ಪಾರ್ವತಿ ಕಣ್ಣು ತೆರೆಯುತ್ತಾಳೆ : ಎದುರಿಗೇ ನಿಂದಿದ್ದಾನೆ ಪರಮೇಶ್ವರ !



'ನಿನಗೋಸ್ಕರ ಬೇರೆಯವರು ತಪಸ್ಸು ಮಾಡಬೇಕು'

ಬಿರುಸು ಹಾಸ್ಯ ಪುಷ್ಕಳವಾಗಿದೆ ಕನ್ನಡ ಸಾಹಿತ್ಯದಲ್ಲಿ. ಒಂದು ಜನಪದ ಗೀತದಲ್ಲಿ ಶಿವ ಗಂಗೆಯನ್ನು ಮದುವೆಯಾಗಿ ಮನೆಗೆ ಬರುತ್ತಾನೆ. ಅವಳನ್ನು ಗೌರಿ ಕಂಡು ಮುನಿಸುಗೊಂಡಾಳೆಂದು ತನ್ನ ದೊಡ್ಡ ಜಟೆಯಲ್ಲಿ ಮುಚ್ಚಿಟ್ಟು ಕೊಂಡಿದ್ದಾನೆ. ಬಾಗಿಲಲ್ಲಿ ನಿಂತುಕೊಂಡು "ಗೌರಿ, ಕಾಲಿಗೆ ನೀರು ಕೊಡು" ಎನ್ನುತ್ತಾನೆ. ಗೌರಿ ಎರಡು ಗಿಂಡಿಗಳಲ್ಲಿ ನೀರು ತರುತ್ತಾಳೆ. ಗಂಗೆ ಶಿವನ ನೆತ್ತಿಯ ಮೇಲೆ ಇರುವುದು ಅವಳಿಗೆ ಗೊತ್ತು. ಏನೂ ಅರಿಯದವನಂತೆ ಶಿವ ವಿಸ್ಮಯಪಟ್ಟು ಕೇಳುತ್ತಾನೆ : "ಒಂದ್ಗಿಂಡಿ ಬೇಕೆಂದ್ರೆ ಎರಡ್ಗಿಂಡಿ ಏಕೆ ತಂದೆ ? ಇಂದೇನು ನಿನ್ನಂದ, ಸಿರಿಗೌರಿ ?" ಗೌರಿ "ನಿನಗೊಂದು ನೀ ತಂದಿರುವವಳಿಗೊಂದು" ಎಂದು ಹಾಸ್ಯಮಾಡುತ್ತಾಳೆ, ಮತ್ತು ಖಾರವಾಗಿ ಎಚ್ಚರಿಕೆ ಕೊಡುತ್ತಾಳೆ ಹೀಗೆ : ಬಾಗಿ ಬಾ ಶಿವರಾಯ ಬಾಗಿಲು ಬಡಿದಾವು ! ಬಾಯಾಗ್ಳ ಎರಡು ಹಲ್ಲು ಉದಿರ್ಯಾವು ! ತಲಿಮೇಗಳ ಜಾಲಿಯ ಇಳಿಸಿ ಬರಬೇಕು !" ಸವತಿಮಾತ್ಸರ್ಯ ಹೆಂಗಸಿಗೆ ಅಂಟಿದ್ದು.

ಸುಳ್ಳರು ವಂಚಕರು ಕಳ್ಳತನಮಾಡುವವರು ಮುಂತಾದ ದುರ್ಜನರನ್ನು ಎಲ್ಲರೂ ಖಂಡಿಸುತ್ತಾರೆ. ದುರ್ಜನರ ಸಂಖ್ಯೆ ಅಷ್ಟೇನೂ ಹೆಚ್ಚಾಗಿಲ್ಲ. ಆದರೆ ಬೂಟಾಟಿಕೆಯ ಡಂಭಗಾರರು ಸಮಾಜವನ್ನು ತುಂಬಿಕೊಂಡಿದ್ದಾರೆ. ಅವರನ್ನು ಅಪಹಾಸ್ಯಕ್ಕೆ ಪಕ್ಕಾಗಿಸುವ ಕನ್ನಡ ಕವಿಗಳಲ್ಲಿ ಸರ್ವಜ್ಞ ಬಲಿಷ್ಠ. ಸಾಧು ಸಂತ ಬೈರಾಗಿ ಜಂಗಮ ಸನ್ಯಾಸಿ ವಿರಕ್ತ ದಾಸ ಯಾತ್ರಿಕ ಎಂಬ ನಾನಾ ಹೆಸರುಗಳನ್ನು ಇಟ್ಟುಕೊಂಡು ಜನರಿಂದ ಅನ್ನ ಬಟ್ಟೆಬರಿ ಹಣ ಕಸಿಯುವ ಠಕ್ಕರು ಅವನ ಕಾಲದಲ್ಲಿ ಬಹುವಾಗಿದ್ದರು. ಈಗಲೂ ಇಲ್ಲದೇ ಇಲ್ಲ. ಅಂಥವರನ್ನು ಕಂಡು ಸರ್ವಜ್ಞನಿಗೆ ಅಸಹ್ಯ ಮತ್ತು ಸಿಟ್ಟು. ಚುರು ಗುಟ್ಟುವ ಮಾತುಗಳ ಮೂಲಕ ಅವರನ್ನು ದಂಡಿಸುತ್ತಾನೆ. ಅವನ ನೂರಾರು ಚುಚ್ಚುನುಡಿಗಳಲ್ಲಿ ಇವು ಕೆಲವು :

"ತತ್ವವೇನನ್ನೂ ಅರಿಯದೆ ಮೈಯೆಲ್ಲವನ್ನೂ ರುದ್ರಾಕ್ಷಿಗಳಿಂದ ತುಂಬಿ ಕೊಂಡರೆ ಫಲವೇನು ? ಅತ್ತಿಯ ಮರ ಕಾಯಿಗಳನ್ನು ಹೊತ್ತಂತೆ ನಿಷ್ಫಲ !"

"ತತ್ವವೇನನ್ನೂ ಅರಿಯದೆ ಮೈಯೆಲ್ಲ ವಿಭೂತಿ ಬಳಿದುಕೊಂಡವನು

ಮುಕ್ತಿ ಆಗುತ್ತಾನೆಯೆ ? ಬೂದಿಯಲ್ಲಿ ಹೊರಳಾಡಿದ ಕತ್ತೆಯಂತೆ ಅವನೂ ಕತ್ತೆ. ಶುದ್ಧ ಕತ್ತೆ!"

"ದಿನದಿನವೂ ಸುಮ್ಮನೆ ನೀರಿನಲ್ಲಿ ಮುಳುಗಿ ಎದ್ದವನು ಸ್ವರ್ಗಕ್ಕೆ ಏರು ತ್ತಾನೆಯೆ ? ಹಾಗಾದರೆ ಜಲದಲ್ಲೇ ಹುಟ್ಟಿ ಸದಾ ಜಲದಲ್ಲೇ ಇರುವ ಕಪ್ಪೆಯೂ ಅಲ್ಲಿಗೆ ಏರಬೇಕಲ್ಲವೆ ?"

"'ತತ್ವಮಸಿ' (=ನೀನೇ ಬ್ರಹ್ಮ ಎಂಬ ಘನ ತತ್ವ) : ಎಂಬುದಕ್ಕೆ 'ತುತ್ತು ಸವಿ' ಎಂದು ಅರ್ಥಮಾಡಿಕೊಂಡು ಮೋಪಾಗಿ ಉಣ್ಣುವು ದನ್ನು ಕಲಿತವನು ಎಂಥ ಶಿವಯೋಗಿ? ಅವನಿಗೆ ಮೋಕ್ಷ ಉಂಟೆ?"

ನೀತಿ ನಿಷ್ಠೆ ಧರ್ಮಗಳಲ್ಲಿ ಹೇಳುವುದೊಂದು ಮಾಡುವುದೊಂದು ಎಂಬ ತರ ಹೆಯ ಅನಾಚಾರಿಗಳನ್ನು ಮಾತ್ರವೆ ಅಲ್ಲ ಅವನು ಬಯ್ಯುವುದು. ಸಮಾಜದಲ್ಲಿ ಇರುವ ಇತರ ಬಗೆಯ ವಂಚಕರನ್ನೂ ಹಳಿದು ಛೀಮಾರಿ ಮಾಡುತ್ತಾನೆ. ತಮ್ಮೊಳಗೆ ಸಕಲ ಜ್ಞಾನ ತುಂಬಿತುಳುಕುತ್ತಿದೆಯೆನ್ನುವ ಜಂಭಗಾರರಿಗೆ ಈ ಪೆಟ್ಟು ಹಾಕುತ್ತಾನೆ :

"ಒಲ್ಲೆನೆಂಬುವ ಮಾತು ಎಲ್ಲವೂ ಹಸಿಕಾಣೊ ।
ಬಲ್ಲರೆ ಬಲ್ಲೆನೆನಬೇಡ । ಸುಮ್ಮನಿರ ।
ಬಲ್ಲವನೆ ಬಲ್ಲ ಸರ್ವಜ್ಞ ॥"

ಒಡವೆ ಮಾಡಿಸುವದರಿಂದ ಚಿನ್ನ ಬೆಳ್ಳಿ ಕದಿಯುವ ಅಕ್ಕಸಾಲೆಯ ದೂಷಣೆ ಇದು :

"ಅಕ್ಕಸಾಲೆಯು ಊರಿಗೊಂದೊಕ್ಕಲು ಎನಬೇಡ ।
ಬೆಕ್ಕು ಬಂದು ಇಲಿಯ ಹಿಡಿವಂತೆ । ಊರಿಗೇ ।
ರಕ್ಕಸನಹನು ಸರ್ವಜ್ಞ ॥"

ತಾನು ರೂಪವತಿ ಎಂದು ಬಿಂಕದಿಂದ ಬೀಗುವವಳಿಗೆ ಈ ಎಚ್ಚರಿಕೆ ಕೊಡು ತ್ತಾನೆ :

"ಸುಂದರಾಂಗನೆ ಬಂದು ಮುಂದೆ ತಾ ನಿಂದಿರಲು,
ಶರೀರವ ಸಂದು ಗೊಂದು ತಿಳಿದ ಜ್ಞಾನಿ ಎಲು
ಬಿನ ಹಂದರವನ್ನು ಕಾಣುತ್ತಾನೆ !"

ಈ ಪದ್ಯದಲ್ಲಿ "ಸುಂದರಿ ಎಂದುಕೊಂಡು ಗರ್ವಿಸುವ ನೀನು ನಿಜವಾಗಿ ಬರಿ ಮೂಳೆಗಳ ಪಂಜರ !" ಎಂಬ ಮೂದಲಿಕೆ ಮಿನುಗುತ್ತದೆ. ಮೂದ ಲಿಕೆಯ ರಭಸವನ್ನು ರನ್ನಕವಿಯ "ಗದಾಯುದ್ಧ"ದಲ್ಲಿ ನೋಡಬಹುದು.

ಸರೋವರದಿಂದ ಎದ್ದುಬಂದ ದುರ್ಯೋಧನ ಪಾಂಡವರ ಮುಂದೆ ನಿಂತು ಮೂದಲಿಸುತ್ತಾನೆ: "ಅಡವಿಯಲ್ಲಿ ಬೇರು ಚಿಕ್ಕೆ ತಿನ್ನುತ್ತ ಅಡಗಿಕೊಂಡಿದ್ದಿರಿ: ಈಗ ನನ್ನೆದುರು ನಿಲ್ಲುವಷ್ಟು ಎದೆಗಾರಿಕೆ ಬಂತೆ ನಿಮಗೆ?" ಭೀಮನನ್ನು ದೃಷ್ಟಿಸುತ್ತ ಗರ್ಜಿಸುತ್ತಾನೆ: "ಬುಟ್ಟಿ ಸವುಟು ಹಿಡಿದುಕೊಂಡು ಅಡಿಗೆ ಮಾಡಿದ ನೀನು ಗದೆಹಿಡಿದು ಅಬ್ಬರಿಸುತ್ತೀಯಾ?" ಭೀಮ ಉತ್ತರವಾಗಿ ಹೇಳುತ್ತಾನೆ: "ಮೀನು ಏಡಿ ಕಪ್ಪೆಗಳಂತೆ ನೀರಿನಲ್ಲಿ ಮುಳುಗಿ ತಲೆಮರೆಸಿ ಕೊಂಡಿದ್ದೆ: ಅದು ನಾಚಿಕೆಗೇಡಲ್ಲವೆ? ಹಿಂದೊಮ್ಮೆ ಗಂಧರ್ವ ನಿನ್ನನ್ನು ಹೆಡೆಮುರಿ ಕಟ್ಟಿ ಮೇಲಕ್ಕೆ ಒಯ್ದ: ಆ ಅವಮಾನವನ್ನು ಮರೆತುಬಿಟ್ಟೆಯಾ? ಗೋವುಗಳನ್ನು ಅಪಹರಿಸಲು ಬಂದು ನನ್ನ ತಮ್ಮ ಪಾರ್ಥನಿಂದ ಪೆಟ್ಟು ತಿಂದು ಕಾಲಿಗೆ ಬುದ್ಧಿಹೇಳಿ ಬದುಕಿಕೊಂಡೆ: ಅದನ್ನು ಮರೆತುಬಿಟ್ಟೆಯಾ? ನಿನ್ನ ತಮ್ಮ ದುಶ್ಶಾಸನನನ್ನು ನಾನು ಕೆಡಪಿಕೊಂಡು ಅವನ ರಕ್ತವನ್ನು ಹೀರುತ್ತಿದ್ದಾಗ ನೀನು ಮಿಳ್ಮಿಳನೆ ಕಣ್ಣುಬಿಡುತ್ತ ತೆಪ್ಪಗಿದ್ದೆ; ಅದನ್ನೂ ಮರೆತೆಯಾ?" ಕೌರವನು ರೇಗಿಬಿದ್ದು ಸವಾಲು ಹಾಕುತ್ತಾನೆ: "ನೀನು ಅರ್ಜುನ ಧರ್ಮರಾಯ ಮೂವರಲ್ಲಿ ಒಬ್ಬರು ಎದುರಾಗಿ ನಿಲ್ಲಲಿ; ಅಥವಾ ಮೂವರೂ ಒಟ್ಟಾಗಿ ನಿಲ್ಲಿ. ಈ ಗದೆಯಿಂದ ಕುಟ್ಟಿ ಕುಟ್ಟಿ ಕೊಲ್ಲುತ್ತೇನೆ!" ಭೀಮ ಪ್ರತಿಯಾಗಿ ನುಡಿಯುತ್ತಾನೆ: "ನಿನಗೆ ನಾನೇ ಸರಿ. ಅಣ್ಣನ ವಚನವನ್ನು ಪಾಲಿಸಲೋಸ್ಕರ ನಾನು ಅಡಿಗೆ ಭಟ್ಟನಾದೆ: ಈ ಹೊತ್ತು ನಿನ್ನ ದೇಹದ ಮಾಂಸವನ್ನು ಬೇಯಿಸಿ ಪಿಶಾಚಿಗಳಿಗೆ ಇಕ್ಕುತ್ತೇನೆ!" ಅವರಿಬ್ಬರಿಗೂ ದ್ವಂದ್ವ ಕಾಳಗ ಆಗುತ್ತದೆ. ಆಗ ಅವರು ಆಡುವ ಮಾತೂ ಹಾಕುವ ಏಟೂ ಒಂದಕ್ಕೊಂದು ಸಮನಾಗಿ ಭಯಂಕರವಾಗುತ್ತವೆ: ಮಾತೇ ಏಟೂ ಏಟೇ ಮಾತೂ ಎನ್ನಿಸುತ್ತವೆ:

ಕೌರವ : ನನ್ನ ಆನೆಗಳನ್ನು ಧ್ವಂಸಮಾಡಿದ್ದಕ್ಕೆ ಈ ಏಟು!
ಭೀಮ : ಅರಗಿನ ಮನೆಯಲ್ಲಿ ಸುಟ್ಟುಬಿಡಲು ಪ್ರಯತ್ನಿಸಿದ್ದಕ್ಕೆ ಈ ಏಟು!
ಕೌರವ : ನನ್ನ ತಮ್ಮಂದಿರನ್ನು ಕೊಂದದಕ್ಕೆ ಈ ಪೆಟ್ಟು!
ಭೀಮ : ವಿಷದ ಲಡ್ಡುಗೆ ತಿನ್ನಿಸಿದ್ದಕ್ಕೆ ಈ ಪೆಟ್ಟು!
ಕೌರವ : ದುಶ್ಶಾಸನನ ನೆತ್ತರು ಕುಡಿದಿದ್ದಕ್ಕೆ ಈ ಹೊಡೆತ!
ಭೀಮ : ಕಪಟ ದ್ಯೂತ ಹೂಡಿದ್ದಕ್ಕೆ ಈ ಹೊಡೆತ!
ದ್ರೌಪದಿಯನ್ನು ಎಳೆದುದಕ್ಕೆ ತಗೊ ಈ ಲಾತ!

ಅಭಿಮನ್ಯು ಕುಮಾರನ ಕಾಳಗ ಸುಪ್ರಸಿದ್ಧವಾಗಿದೆ. ಅವರ ವೈಭವ



'ತಗೋ ಈ ಲಾತ !'

ವನ್ನು ಕುಮಾರವ್ಯಾಸನ "ಭಾರತ"ದಲ್ಲಿ ಈಕ್ಷಿಸಬೇಕು. ಅಭಿಮನ್ಯು ಬಾಣಗಳನ್ನು ಕಳಿಸುವುದರಲ್ಲಿ ಎಷ್ಟು ನಿಪುಣನೊ ಮಾತಿನಲ್ಲಿ ಆಡುವುದರಲ್ಲೂ ಅಷ್ಟೇ ನಿಪುಣ. ಕೌರವ ಅಡ್ಡಗಟ್ಟಿ "ಮಗು ನೀನು, ಕೆಡಬೇಡ ; ಹೋಗು !" ಎಂದರೆ, ಅಭಿಮನ್ಯು ಎದುರಾಡುತ್ತಾನೆ : "ಹೌದು ನಾನು ಮಗು, ನನ್ನ

ಬಾಣಗಳಿಗೆ ಮಗುತನವಿಲ್ಲ ; ನೋಡು !" ಕರ್ಣ ಬಂದು "ಹುಡುಗನಿಗೆ ಇಷ್ಟೊಂದು ಸೊಕ್ಕೆ ! ಥಡ, ಥಡ ; ತೊಲಗು, ತೊಲಗಾಚೆ !" ಎಂದಾಗ ಅಭಿಮನ್ಯುವಿನ ಜವಾಬು : "ನನ್ನ ಬುದ್ಧಿವಾದ ಬೇಡ. ಹಿಮ್ಮೆಟ್ಟದೆ ಕಾದಾಡು ; ನನ್ನ ಕೈಗುಣ ತೋರಿಸುತ್ತೇನೆ !" ಶಲ್ಯ ಎದುರಾಗಿ "ಬಾಲಕ. ಕರ್ಣನನ್ನು ಸೋಲಿಸಿದನೆಂದು ಅಹಂಕಾರ ಪಡಬೇಡ. ನಾನು ಶಲ್ಯ ; ನೀನು ಹಿಂದಿರುಗಿದರೆ ಒಳ್ಳೆಯದು" ಎನ್ನುತ್ತಾನೆ. ಅಭಿಮನ್ಯು ಉತ್ತರ ಕೊಡುತ್ತಾನೆ : "ಬಾಲತ್ವ ಕೊರತೆಯೇ ? ರಾಜಪುತ್ರರಿಗೆ ಕಟ್ಟಾಳತನದ ಅಭಾವ. ಆಳ್ತನ ನಿನಗೆ ಪರಿಚಯ ಆಗಿದೆಯೇ ?" ದುಶ್ಯಾಸನ ಕೋಪದಿಂದ ಬಂದು ಧಿಕ್ಕಾರದ ನುಡಿ ಆಡುತ್ತಾನೆ : "ನೀನೊಬ್ಬ ಅಪವೇರಿ ಹುಡುಗ. ಭೀಮಸೇನನೊ ಫಲ್ಗುಣನೊ ನನಗೆ ಎದುರಾದರೆ ಲೇಸು ! ಏನು ಮಾತಲಿ ಈಗ!" ಅಭಿಮನ್ಯು ಅಣಕವಾತಿನಿಂದ ಅವನನ್ನು ಸದೆಬಡಿಯುತ್ತಾನೆ : "ಎಂಥಾ ಬಂಡ, ಕೊಚ್ಚೆ ಕಾಲುವೆಯಲ್ಲಿ ಮುಳುಗುತ್ತ ಏಳುತ್ತ 'ಸಮುದ್ರ ನನಗೊಂದು ಕಾಲುವೆ' ಎನ್ನುತ್ತೀಯಲ್ಲೋ ! ಮೊದಲು ನನ್ನನ್ನು ಗೆಲ್ಲು : ಆಮೇಲೆ ಭೀಮಾರ್ಜುನರನ್ನು ಬಯಸುವಿಯಂತೆ !" ಲಕ್ಷಣ ಮೊದಲಾದ ಕೌರವ ಮಕ್ಕಳು ಎದುರು ಬಂದು "ನಮ್ಮ ಗೆಳೆಯ ಶಲ್ಯಕುಮಾರನನ್ನು ಕೊಂದು ; ಇಲ್ಲಿದ್ದರೆ ನಿನ್ನ ಬಸಿರಿನಿಂದ ಅವನನ್ನು ಹೊರತೆಗೆಯುತ್ತೇವೆ" ಎಂದು ಅಬ್ಬರಿಸುತ್ತಾರೆ. ಅಭಿಮನ್ಯುವಿಗೆ ನಗುವೋ ನಗು. ಸಹಜವಾಗಿ ಹಂಗಿಸಿ ಆಡುತ್ತಾನೆ : "ಅಪ, ಲಕ್ಷಣಾದಿಗಳು ದಿಟವಾಗಿ ದಿಟ್ಟರು, ಜಗಜಟ್ಟಿಗಳು ! ನೀವೆ ಯಾರಿಗೆ ಈಡು ಪರಾಕ್ರಮದಲ್ಲಿಯು !" ಕರ್ಣ ಮುಂದೆ ಬಿಲ್ಲಾಳ್ತನಕ್ಕೆ ಹೆದರಿ ಹಿಂದಿನಿಂದ ಅಭಿಮನ್ಯುವಿನ ಬಿಲ್ಲನ್ನು ಮೂರು ತುಂಡಾಗಿ ತುಂಡರಿಸುವ ; ಅಭಿಮನ್ಯು ಹಿಂತಿರುಗಿ ನೋಡಿ ಹಂಗಿಸುವ "ಎಂಥಾ ಬಾಣ ಪ್ರಯೋಗ ! ಎಷ್ಟು ಕೌಶಲ್ಯ ! ಪುರುಷರೆ ! ಇನ್ನಾರಿಗುಂಟು ಇಂಥಾ ವಿದ್ಯೆ ! ಹಿಂದಿನಿಂದ ಬಾಣ ಕಳಿಸುವ ಶೌರ್ಯ ಕರ್ಣನಿಗಲ್ಲದೆ ಮತ್ತಾರಿಗುಂಟು !" ಆ ಸಮಯದಲ್ಲಿ ಕಟಕಿಯನ್ನು ಕಿವಿಯಿಂದ ಕೇಳಿ ಕರ್ಣ ಬದುಕಿರಬಹುದೆ ?

ಸಂಚಿಯ ಹೊನ್ನಮ್ಮನೆಂಬ ಕವಯಿತ್ರಿ ಪತಿವ್ರತೆಯ ರೀತಿನೀತಿಗಳನ್ನು ವಿವರಿಸುವ ಚಿಕ್ಕ ಕಾವ್ಯವನ್ನು ಬರೆದಿದ್ದಾಳೆ. ಅದರಲ್ಲಿ ಬರುವಂಥ ಈ ವಾಕ್ಯಗಳಿವೆ :

"ಪೆಣ್ಣಲ್ಲವೆ ತಮ್ಮನೆಲ್ಲ ಪಡೆದ ತಾಯಿ ।
ಪೆಣ್ಣಲ್ಲವೆ ಪೊರೆದವಳು ॥

ಹೆಣ್ಣು ಹೆಣ್ಣೆಂದೇಕೆ ಜೀಳಂಗಳೆವರು । (ಹೀಯಾಳಿಸುತ್ತಾರೆ)
ಕಣ್ಣು ಕಾಣದ ಗಾವಿಲರು ॥ (ಮೂಢರು)
ಕುವರನಾದೊಡೆ ಬಂದ ಗುಣವೇನದರಿಂದೆ ।
ಕುವರಿಯಾದೊಡೆ ಕುಂದೇನು ॥"

ತಮ್ಮನ್ನು ಹೆತ್ತವಳು ಹೆಂಗಸು ; ಸಾಕಿ ಸಲಹಿದವಳು ಹೆಂಗಸು, ಹೀಗಿರುವಾಗ ಈ ಮೂಢ ಗಂಡಸರು ಹೆಣ್ಣು ಹೆಣ್ಣು ಎನ್ನುತ್ತ ಹೀಯಾಳಿಸುವುದೇತಕ್ಕೆ ? ಮಗನಾದರೆ ಏನು ಹೆಚ್ಚುಗಾರಿಕೆ ? ಮಗಳಾದರೆ ಯಾವ ಕುಂದು ಎಂಬುದು ಹೊನ್ನಮ್ಮನ ಅಣಕ. ಅದು ಲಘು ಹಾಸ್ಯವೇ ಆಗಿದೆ. ಅದನ್ನು ಆಲಿಸಿದರೆ ಯಾವ ಗಂಡಸಿಗೂ ನೋವು ಆಗಲಾರದು. ಮೂದಲಿಕೆ ಹಿತವಾಗಿಯೂ ನಡೆಯಬಹುದು ಎಂಬುದಕ್ಕೆ ಅದು ಉದಾಹರಣೆ.

ತಿಮ್ಮಾರ್ಯನ "ಆನಂದ ರಾಮಾಯಣ"ದಲ್ಲಿ ರಾಕ್ಷಸರನ್ನು ವಿಭೀಷಣ ಹೇಗೆ ಮೂದಲಿಸುತ್ತಾನೆ : "ಹೋಹೋ, ಏಕೆ ಇಷ್ಟೊಂದು ಗಜಗಜ ! ನೀವೆಲ್ಲ ಮಹಾ ಮಹಾ ಸಾಹಸಿಗಳು ಹೌದು : ಹೌದು ನಾ ಬಲ್ಲೆ. ಒಂದು ಕಪಿ ಗೂಢಚಾರಿಯಾಗಿ ಬಂದು ಲಂಕೆಯನ್ನು ಸುಟ್ಟುಹಾಕಿತು ; ರಕ್ಕಸ ಸಮೂಹವನ್ನು ಕೊಂದಿಕ್ಕಿತು ; ಆಗ ನಿಮ್ಮ ಬಾಹುಬಲ ಏನಾಯ್ತು ? ನಾಚಿಕೆಯಿಲ್ಲ ನಿಮಗೆ, ಪಟಾಟೋಪ ಮಾಡುತ್ತೀರಿ !" ಇದು ಸ್ವಲ್ಪ ಬಿರುಸಾಗಿಯೇ ಇದೆ.

ಕೆಲವು ಕನ್ನಡ ಕವಿಗಳಿಗೆ ತಮ್ಮ ನಂಬಿಕೆಯೇ ಸರಿ, ತಮ್ಮ ಆಚರಣೆಯೇ ಸರಿ, ತಮ್ಮ ಮತಪಂಥವೇ ಸರಿ ಎಂಬ ಅತಿ ಮಮತೆ ಉಂಟು. ಇತರರ ನಂಬಿಕೆ ಆಚಾರ ಪಂಥಗಳನ್ನು ಹಾಗೆ ಹೀಗೆ ದೂಷಿಸುವುದೂ ಅಪಹಾಸ್ಯ ಮಾಡುವುದೂ ಅವರ ಪದ್ಧತಿ ಬ್ರಹ್ಮಶಿವನೆಂಬ ಜೈನಕವಿ ಈ ರೀತಿ ಗೇಲಿಗೈದಿದ್ದಾನೆ : "ಹಸು ಒಂದು ಪಾನದಷ್ಟು ಹಾಲು ಕೊಡುತ್ತದೆ ; ಅದಕ್ಕೆ ನಮಸ್ಕಾರ ಮಾಡುತ್ತಾನೆ ಭಕ್ತ. ಎಮ್ಮೆ ಹೆಚ್ಚು ಹಾಲು ಕರೆಯುತ್ತದೆ ; ಭಕ್ತ ಅದರ ಮುಂದೆಯೋ ಅಡ್ಡಬೀಳಲಿ !" "ಶಂಭು ತನ್ನ ದೇಹದ ಅರ್ಧ ಭಾಗವನ್ನು ಗೌರಿಗೆ ಕೊಟ್ಟನಂತೆ ; ಅವಳು ತನ್ನ ದೇಹದ ಅರ್ಧಭಾಗವನ್ನು ಅವನಿಗೆ ಕೊಟ್ಟಳಂತೆ, ಮಿಕ್ಕ ಅರ್ಧಭಾಗವನ್ನು ಅವರು ಯಾರಿಗೆ ಕೊಟ್ಟರು ಹೇಳಿ ?" "ಭೂಮಿ ಎಲ್ಲವನ್ನೂ ರುದ್ರ ದಹಿಸಿಬಿಡುತ್ತಾನೆ : ಎನ್ನುತ್ತೀರಿ. ಅವನ ಭಕ್ತರು ಭೂಮಿಯ ಮೇಲೆ ಇದ್ದಾರೆ. ಅಲ್ಲವೆ ? ಹಾಗಾದರೆ ರುದ್ರ ಅವರನ್ನೂ ಸುಟ್ಟುಹಾಕುತ್ತಾನೆಯೊ ಅಥವಾ ಅವರನ್ನು ಎಲ್ಲೋ ಬೇರೆ ಕಡೆ ತೆಗೆದಿರಿಸಿ ಸುಡುವ ಕಾರ್ಯವನ್ನು ನೆರವೇರಿಸುತ್ತಾನೆಯೊ ?"

ವೃತ್ತವಿಲಾಸನೆಂಬ ಜೈನ ಕವಿ ಇನ್ನೂ ತೀಕ್ಷ್ಣವಾಗಿ ಟೀಕಿಸುತ್ತಾನೆ : "ಹೊಳೆಯುವ ಸೂರ್ಯ, ಹರಿಯುವ ಗಂಗೆ, ಬೀಸುವ ಗಾಳಿ, ಧಗಧಗಿಸುವ ಬೆಂಕಿ, ಉಳುವ ನೆಲ, ಕರೆಯುವ ಆಕಳು, ಇರುವ ಮನೆ, ನಿಂತಿರುವ ದೊಡ್ಡ ಮರ, ಉಣ್ಣುವ ಅನ್ನ, ಕಸಬಿನ ಹತ್ಯಾರು–ಇವುಗಳನ್ನು ದೇವರೆಂದು ಪೂಜಿಸುವವ ದೈವಮೂಢ, ಅಲ್ಲವೆ ?" "ತೋಳ ಯಾರಲ್ಲಿಯೂ ಭಿಕ್ಷೆ ಬೇಡದೆ ಕುರಿ ಹಿಡಿದು ತಿನ್ನುತ್ತದೆ : ಬೇಡಿ ಉಣ್ಣುವ ದೇವರು ತೋಳಕ್ಕಿಂತ ಕೀಳು !" "ಅಜ್ಞಾನಿಗಳು ವರ ಕೊಡುತ್ತದೆಂದು ಹಣ ಖರ್ಚು ಮಾಡುತ್ತಾರೆ. ಆ ದೇವರು ವರ ಕೊಡುವ ಬಗೆ ಯಾವುದು ? ಬಂಜೆಯ ಹಿರಿಯ ಮಗ ಬಿಸಿಲು ಕುದುರೆಯಲ್ಲಿ ಸ್ನಾನಮಾಡಿ, ಕಲ್ನಾರಿನ ಧೋತ್ರ ಉಟ್ಟು, ಆಕಾಶ ಪುಷ್ಪವನ್ನು ಮುಡಿದು, ಮೊಲದ ಕೋಡಿನ ಬಿಲ್ಲನ್ನು ಹಿಡಿದು ಬರುತ್ತಿದ್ದಾನೆ ಎನ್ನು. ಅದನ್ನು ಹುಟ್ಟುಗುರುಡ ನಡುರಾತ್ರಿಯ ಕತ್ತಲಿನಲ್ಲಿ ನೋಡಿದ ಎನ್ನು. ಆ ಸಂಗತಿ ನಿಜವಾದರೆ ವರ ಕೊಡುವುದೂ ನಿಜ !"

ಪುರಂದರದಾಸ ಮೊದಲಾದವರ ಕೀರ್ತನೆಗಳಲ್ಲಿ ಎದುರೆದುರಿಗೇ ನಿಂದಿಸುವ ಕಟುನುಡಿಗಳು ಕೇಳಿಬರುತ್ತವೆ ; ಇವುಗಳನ್ನು ನೋಡಿ :

"ಕದವ ಮುಚ್ಚಿದಳು ಅದೇಕೊ । ಗಯ್ಯಾಳಿ ಮೂಳಿ ।
ಕದವ ಮುಚ್ಚಿದಳದೇಕೊ । ಚಿಲಕ ಅಲ್ಲಾಡುತಿದೆ ॥
ಒಳಗಿದ್ದ ಪಾಪವೆಲ್ಲ । ಹೊರಗೆ ಹೋದೀತೆಂದು ॥
"ಮಡಿ ಮಡಿ ಮಡಿಯೆಂದು । ಮೂರ್ಮಾರು ಹಾರುತಿ ।
ಮಂಡಿಯೆಲ್ಲಿ ಬಂತೆ ಬಿಕನಾಶಿ ॥"
"ನಾಯಿ ಬಂದದಪ್ಪ । ಅಣ್ಣ ಅತ್ತಲಾಗಿರಿ ।
ನಾಯಿ ಎಂದರೆ ನಾಯಿಯಲ್ಲ ॥
ಕೊಟ್ಟ ಸಾಲವ ಕೊಡದ ನಾಯಿ ।
ಕಟ್ಟೆಮೇಲೆ ಕುಳಿತುಕೊಂಡು ।
ಅಟ್ಟಹಾಸದಿ ಬಗುಳುವ ನಾಯಿ ॥"

"ತೀರ್ಥವನು ಹಿಡಿದವರೆಲ್ಲ ತಿರುನಾಮಧಾರಿಗಳೆ ।
ನೀತಿತಪ್ಪಿದವರೆಲ್ಲ ದೇವ ಬ್ರಾಹ್ಮಣರೆ ಕೃಷ್ಣ ।
ಭಂಗಿ ಮುಕ್ಕಗಳೆಲ್ಲ ಲಿಂಗವಂತರೆ ಕೃಷ್ಣಾ ।
ವೇಷಧಾರಿಗಳೆಲ್ಲ ಸನ್ಯಾಸಿಗಳಾಗುವರೆ ಕೃಷ್ಣಾ ॥"

೧೨

ಇದುವರೆಗೆ ವಿವರಿಸಿದ ಹಾಸ್ಯದ ರೀತಿಗಳೆಲ್ಲ "ಪರಸ್ಥ"; ಎಂದರೆ ಇತರರನ್ನು ಕುರಿತು ಮಾಡಿದ ಹಾಸ್ಯ, ಪರಿಹಾಸ್ಯ, ಅಪಹಾಸ್ಯ. "ಪರಸ್ಥ" ಪದ್ಧತಿಯೆ ಹೆಚ್ಚು. "ಆತ್ಮಸ್ಥ" ಪದ್ಧತಿಯೂ ಉಂಟು. ಅದರಲ್ಲಿ ಹಾಸ್ಯಗಾರ ತನ್ನನ್ನು ತಾನೇ ಹಾಸ್ಯಮಾಡಿಕೊಳ್ಳುತ್ತಾನೆ ; ಹಾಸ್ಯಗಾರನೂ ಅವನೆ, ಹಾಸ್ಯದ ಪಾತ್ರವೂ ಅವನೆ. ಪ್ರಪಂಚದಲ್ಲಿ ಅಂಥವರು ಇದ್ದಾರೆಯೆ ಎಂಬ ಶಂಕೆ ಏಳಬಹುದು. ಆದರೆ ದಿಟವಾಗಿ ಹಲಕೆಲವರಾದರೂ ಇದ್ದಾರೆ. ಕವಿಗಳಲ್ಲೂ ಕಲೆಗಾರರಲ್ಲೂ ಅವರ ಸಂಖ್ಯೆ ಬಲು ಕಡಮೆ ; ಏತಕ್ಕೆಂದರೆ ಅವರಿಗೆಲ್ಲ ಸಾಮಾನ್ಯವಾಗಿ ತಮಗೆ ಸಮಾನರಾದವರು ಯಾರೂ ಇಲ್ಲ ಎಂಬ ಅಹಂಕಾರ. ವಚನಸಾಹಿತ್ಯದ ಶರಣರೂ ಕೀರ್ತನಸಾಹಿತ್ಯದ ದಾಸರೂ ಹಾಗಲ್ಲ. ಅವರು ಗಾಢ ದೈವಭಕ್ತರು, ಅತ್ಯಂತ ನಿಷ್ಕಾಮವಂತರು, ಸತ್ಯ ಪ್ರೇಮಿಗಳು. ತಪ್ಪುಗಳನ್ನು ಮನ್ನಿಸುವುದು ಅವರಿಗೆ ಅಸಾಧ್ಯ. ಲೋಕದ ಜನರ ಅಂಕುಡೊಂಕನ್ನು ಅವರು ಸ್ಪಷ್ಟವಾಗಿ ಕಾಣುತ್ತಾರೆ, ಸ್ಪಷ್ಟವಾಗಿ ಖಂಡಿಸುತ್ತಾರೆ. ಹಾಗೆಯೇ ತಮ್ಮೊಳಗೂ ಏನು ಕುಂದುಕೊರತೆ ಇದೆಯೊ ಎಂದು ಅವರಿಗೆ ಸದಾ ಅನುಮಾನ. ತಮ್ಮನ್ನು ತಾವೇ ಪರೀಕ್ಷೆಮಾಡಿಕೊಳ್ಳುತ್ತ ಇರುತ್ತಾರೆ. ಇಲ್ಲವೆ ಇಲ್ಲದ ದೋಷ ಇರುವಂತೆ ಅನಿಸುತ್ತದೆ ; ಇರಬಹುದಾದ ಅತ್ಯಲ್ಪ ನ್ಯೂನತೆ ಮಹಾ ಅಪರಾಧದಂತೆ ತೋರುತ್ತದೆ. ಲಜ್ಜೆ ಪಡುತ್ತಾರೆ ; ತಮ್ಮನ್ನು ತಾವೇ ಅಪಹಾಸ್ಯ ಮಾಡಿಕೊಳ್ಳುತ್ತಾರೆ. ಇವುಗಳನ್ನು ಪಿಕ್ಕಿನೋಡಿ:

"ಭಕ್ತಿ ಎಳ್ಳಷ್ಟೂ ಇಲ್ಲ ; ಯುಕ್ತಿ ಶೂನ್ಯ,
ಅಯ್ಯಾ, ನಾನು. ತನುವಂಚಕ ಮನವಂಚಕ
ಧನವಂಚಕ ನಾನಯ್ಯಾ. ಕೂಡಲಸಂಗಮದೇವಾ,
ಮಳಲ ಗುಡ್ಡೆ ನನ್ನ ಮಾತು !"

"ಡಂಭಕನೆಂಬವನ ನಾನು. ಡಂಭ ಡೌಲು ಎನ್ನದಯ್ಯಾ."

"ನುಡಿಯಲ್ಲಿ ಜಾಣ ನಡೆಯಲ್ಲಿ ಜಾಣನಲ್ಲಯ್ಯ ;
ವೇಷದಲ್ಲಿ ಅಧಿಕ ಭಾಷೆಯಲ್ಲಿ ಅಧಿಕನಲ್ಲಯ್ಯ ;
ಏಕಾಂತ ದ್ರೋಹಿ ಗುಪ್ತಪಾತಕಿ ಯುಕ್ತಿಶೂನ್ಯ

ನಿಗೆ ಸಕಳೇಶ್ವರ ಒಲಿ ಎಂದರೆ ಎಂತು
ಒಲಿವನಯ್ಯಾ ?"
"ದಾಸನೆಂತಾಗುವೆನು ಧರೆಯೊಳಗೆ ನಾನು ।
ವಾಸುದೇವನಲಿ ಲೇಶ ಭಕುತಿಯು ಕಾಣೆ ॥
ಗೂಟನಾಮವ ಹೊಡೆದು ಗುಂಡು ತಂಬಿಗೆ ಹಿಡಿದು ।
ಗೋಟಂಚು ಧೋತರ ಉಟ್ಟು ದಾಟುಕಾಲಿಡುತ ।
ಧರೆಯೊಳಗೆ ಬರುತಿರಲು ಎನ್ನ ।
ಬೂಟಕತನ ನೋಡಿ ಭ್ರಮಿಸದಿರಿ ಜನರೆ ॥"
"ನಾ ಡೊಂಕಾದರೆ ನಿನ್ನ ನಾಮ ಡೊಂಕೆ ।
ಪುರಂದರ ವಿಟ್ಠಲ ॥"
ಸ್ವಾತಂತ್ರ್ಯ ಬುದ್ಧಿ ಬೆರೀಹುದೆ ॥"

ಅಂಥ ಮಹಾತ್ಮರಿಗೆ ಇಂಥ ನಮ್ರತೆ ಸಹಜವಾದದ್ದೆ. ಇತರ ಜನರಿಂದ ಅದನ್ನು ನಾವು ನಿರೀಕ್ಷಿಸಬಹುದೆ ? ಕನ್ನಡ ಸಾಹಿತ್ಯದ ವೈವಿಧ್ಯ ವಿಚಿತ್ರವಾದದ್ದು. ಮಹತ್ವವೇನೂ ಇಲ್ಲದ ಸಾಮಾನ್ಯ ಗ್ರಾಮಸ್ಥರ ಹಾಡು ಒಂದಿದೆ. ಅದರಲ್ಲಿ ಇಬ್ಬರೊ ಮೂವರೊ ಮುಂಜಾನೆಯೇ ಎದ್ದು ಊರಾಚೆ ನಡೆಯುತ್ತಾರೆ. ಸಜ್ಜೆ ಹೊಲಕ್ಕೆ ನುಗ್ಗಿ ಸಜ್ಜೆ ತೆನೆಕೊಯ್ದು ದೊಡ್ಡ ಮೂಟೆ ಕಟ್ಟುತ್ತಾರೆ. ಮುಂದೆ ಆದದ್ದನ್ನು ಅವರ ಬಾಯಿಂದಲೇ ಕೇಳೋಣ :

"ಆಗ ಹೊಲದೋನು ಕಂಡನಪ್ಪ । ಗಾದಿರಯ್ಯ ।
ಭಾರಿ ದಂಟು ಕಿತ್ತನಪ್ಪ । ಗಾದಿರಯ್ಯ ।
ಒಳ್ಳೆ ಹಾಕಾಣ್ಕೆ ಹಾಕಿದ್ನಪ್ಪ । ಗಾದಿರಯ್ಯ ॥
ನಾವ್ಗಂಟು ಮೂಟೆ ಬಿಟ್ಟುಕೊಟ್ಟು । ಗಾದಿರಯ್ಯ ।
ಕಾಲಿಗೆ ಬುದ್ಧಿ ಹೇಳಿದೆವಪ್ಪ । ಗಾದಿರಯ್ಯ ॥"

ಕದ್ದು ಸಿಕ್ಕಿಬಿದ್ದು ಏಟು ತಿಂದದ್ದನ್ನು ಕಳ್ಳರೇ ಉಲ್ಲಾಸದಿಂದ ಹೇಳಿಕೊಳ್ಳುವ 'ಆತ್ಮಸ್ಥ' ಹಾಸ್ಯ ಚೆಲುವಾಗಿದೆ ; ಅವರನ್ನು ನಾವು ಕ್ಷಮಿಸಬಹುದಾದಷ್ಟು ಚೆಲುವಾಗಿದೆ. ಹಾಸ್ಯ ಯಾರಿಗೆ ಒಳ್ಳೆಯದಲ್ಲ ?


ಪ್ರಥಮ ವಿಶ್ವ ಕನ್ನಡ ಸಮ್ಮೇಳನ
1982